(SRI A. G. RAMACHANDRA RAO.)

A sum of Rs. 7·38 lakhs under item 3 above relates entirely to loans for Handloom Industry and this is covered by Central assistance.

It will thus be seen that all but a small portion of the total demand of Rs. 113·28 lakhs is covered by fresh resources and additional assistance which was secured only subsequent to voting on the main demands of the Budget.

I now leave the Supplementary Estimates for the consideration of the House.

Mr. SPEAKER.—There is no necessity to move the cut motions. On the cut motions that have been allowed, members can speak.

DEMAND NO. 2-STATE EXCISE

8. State Excise Duties.

(Recovery of Arrears from defaulting Ganja Contractors.

Sri R. MUNISWAMIAH (Bangalore North—Scheduled Castes).—I have brought this cut motion with the purpose to bring to the notice of this House that some of the present contractors who have been issued licences to grow ganja in their fields are defaulters. The Deputy Commissioner of Kolar District and the Excise Commissioner also have reported that they are defaulters and have recommended some other names of persons who are not defaulters for granting permission. But, I learn that out of six members who have been issued licenses to grow ganja in 30 acres in Goribidanur, five are defaulters. I do not know why Government have taken this attitude to allow more loss in course of time. Sir, I further learn that Government has not taken any serious action or necessary action to recover all the amount in a lumpsum or in instalments.

Sri T. CHANNIAH (Minister for Public Health and Local Self-Government).—Sir, on the recommendation of the Deputy Commissioner, Kolar District and the Excise Commissioner to give 30 acres to grow ganja in Goribidanur in two places, Government have considered all aspects of the question in detail and in consultation of the Deputy Commissioner and the Excise Commissioner, granted permission to six persons to cultivate ganja. It is true that a few defaulters have been granted licence. I do not want to say more about this, because the matter is before the High Court. Considering all aspects, the suitability of the lands and the reliability of applicants licenses have been granted. We have not shown any favouritism to anybody.

DEMAND NO. 11–GENERAL ADMINISTRATION.

25. General Administration (except the Sub-Major heads B. C. & F.)

Reduction of Gazetted posts in the State.

Mr. SPEAKER.—Next demand, Demand No. 11. I want to know whether this cut motion relates to the officers working in the National Extension Service or it relates to a general question.

Sri R. MUNISWAMAIAH.—It is a general question.

Mr. SPEAKER.—It is not allowed then.

Scheme to provide quarters to Administrative Staff of N.E.S. Blocks.

Sri S. SRINIVASA IYENGAR (T.-Narsipur).—Mr. Speaker, my object in sending the cut motion is to know the nature of the scheme that the Government have sanctioned for providing quarters to the Administrative staff working in the National Extension Service Blocks, throughout the State. I want to know the total number of quarters that Government propose to construct, the cost and the extent to which Government of India would give assistance. I also want to know whether after the expiry of the term of the National Extension Service, the development work continues in those Blocks. Suppose, these schemes are not continued; how do Government

dispose of these buildings, because they are putting good many buildings, receiving loan from Government of India which has to be repaid ? After the term of the blocks expires, Government may find it very difficult to continue the scheme in those places. Perhaps, this property would be a wasteful asset to Government. I would also like to know whether Government have thought of making use of them ; if so, how ? This is a very important information that should be furnished before we authorise Government to incur any expenditure like that. I am sorry the concerned Minister is not here. I wish the House is given full information about this scheme because it involves huge expenditure and further commitment on the State funds.

Sri A. G. RAMACHANDRA RAO (Minister for Law and Education).—Sir, the provision for the structures has been done by the Planning Committee and it has been finally decided in consultation with Government of India. In fact, this incidental question came up as to the period the scheme would run and as to the utility of these buildings. We were told that immediately after the Five-Year Plan, the work will not come to an end. Further National work would be taken up and these buildings would be certainly made use of. Other National works are bound to be taken up and these may be used for that. I believe, Sir, that the buildings that we are constructing are of such nature that they can be made use of not only by this Department but by other departments as well. In each of the National Extension Blocks the requirements have been envisaged and provided for. I will get all the details.

DEMAND NO. 14—ADMINISTRATION OF JUSTICE.

27. Administration of Justice.

Nature of pending Bills of the Previous Advocate-General and Assistant Public Prosecutors of transferred Territory.

Sri S. SRINIVASA IYENGAR (T.-Narsipur).—Sir, my object in sending this cut motion was to know the purpose for which the Advocate-General spent the money. The nature of the bill, we are told, is to meet the expenditure incurred by the previous Advocate-General and the Assistant Public Prosecutors of the transferred territory. The latter portion, I am not interested to know. But I want to know how much the Advocate-General spent, where was it incurred and what was the object for which it was incurred. I somehow know that the Advocate-General and the Assistant Abvocate-General were in Delhi for a period of one month. Is it for that that the Bill has come for payment or is there any other expenditure to which Government refer ? If so, what is the nature of the Bill ? That is all I want to know.

1-30 P.M.

Sri A. G. RAMACHANDRA RAO.—The motion is rather confusing, because the matter relates to transferred territory and the previous Advocate-General for Bellary is a Madras Advocate-General. According to the Andhra State Act all payments to be made after a certain date will have to be borne by us as per bills supplied because they will have incurred expenditure and the liability is thrown on the present Government. These bills relate to the journeys performed and the expenditure incurred by the previous Advocate-General.

Regarding Public Prosecutors, there are four Public Prosecutors in the area and they continue even now under the present Government and therefore that question does not present any difficulty. It is only in respect of the Bills of the previous Advocate-General there is some difficulty. We will further examine the bills before any payment is made.

Sri S. SRINIVASA IYENGAR.—Was he not transferred long before the Budget for 1954-55 was framed and why was not this amount included in the original Budget itself ?

Sri A. G. RAMACHANDRA RAO.—We will come to know of these only at the time of presentation of the bills and not before.

Sri S. SRINIVASA IYENGAR.—All right.

Policy in providing Telephones to Public Prosecutors at Bangalore and Mysore.

Sri S. SRINIVASA IYENGAR.—Telephone connections have been provided to the Public Prosecutors in Bangalore and Mysore Cities. Were they provided all along ? If they are being provided now as a new procedure, where was the need for providing telephone connections to Public Prosecutors? What is the volume of work that the Government will have with Public Prosecutors as to necessitate the provision of telephones ? When the Public Prosecutors could discharge their duty efficiently in the previous years without telephone connections where was the urgency or the need for providing them telephones ? I want to know the purpose, because if it is a wasteful expenditure we could avoid it.

Sri A. G. RAMACHANDRA RAO.—All along, the Public Prosecutors of Bangalore and Mysore Cities have been urging for them. This has also been recommended by the District Magistrates of the two places that it is necessary to ascertain information of an emergent nature as and when occasions arise in courts and there have been considerable delay for want of these as to make servants run about would be difficult and causes delay. Because they have been urging, the Government have decided to give them telephone connections. In order to provide for that this demand has been made.

Sri S. SRINIVASA IYENGAR.—All right.

Sri B. HUTCHE GOWDA (Turuvekere).—Sir, on a point of order : is it not necessary to vote on each Demand after discussion is over ?

Sri A. G. RAMACHANDRA RAO.—That procedure could be regulated by the Chair.

Mr. SPEAKER.—The House has agreed to the new procedure suggested earlier and we are proceeding on that. There is no voting on each Demand.

DEMAND No. 17—SCIENTIFIC DEPARTMENTS.

36—Scientific Departments.

Sri T. Thimmaiah's deputation for foreign studies.

Sri S. SRINIVASA IYENGAR.—Sir, I have an object in tabling the cut motion and that is to know the conditions ordered by Government at the time of deputing this individual Sri Thimmaiah for foreign studies. The supplementary demand does not make that point clear. The amount is needed to meet the expenditure incurred by Sri T. Thimmaiah in connection with his studies in England and also to meet the payment of family allowance of Sri Thimmaiah. I feel that in no other case family allowance is given. The salary of the official deputed is paid to his family. There is no payment of separate allowance of this category. Sri Thimmaiah was just a temporary officer of the Geological Department who had put in not more than two months' service at the time of selection. I was surprised to see how Government could make selection of an officer who was not even permanent here, who was only temporary and that too who has put in a service of two or three months. Such an officer has been deputed to London, and he is a B.Sc. graduate and nothing more. Further, at the time of deputing, I would like to know whether it is not customary to know or to lay down certain conditions for deputing. Is the payment in the nature of loan or is it in the nature of scholarship or is the amount the Government propose to spend recoverable or is it an outright expenditure on behalf of the student deputed—these are the points that need clarification. Has this expenditure been sanctioned for the particular studies or has he been sent to qualify himself with additional qualification ? Has he been sent for the benefit of the department which he serves ? These things are to be known. Further, another point to be considered is whether the proposed expenditure is to be admitted today ? I think he was deputed long ago and why was it not included in the Budget at the

time the Budget was prepared? They could have certainly included it and why did they not do it? At this stage when they are faced with bills, they want the amount sanctioned by this House. But he was deputed long back and you could have as well provided for this amount at the time of preparing the Budget.

Sri B. HUTCHE GOWDA (Turuvekere).—On a point of order: the Minister concerned is not here and the Hon'ble Member is asking definite questions for answers.

Sri A. G. RAMACHANDRA RAO.—It may be just a remark but there is no point of order. Any Minister can reply.

Sri B. HUTCHE GOWDA.—If there is no controversy, we agree.

Sri S. SRINIVASA IYENGAR—So, Sir, unless I am convinced, anybody can immediately conclude that there is some personal friendship or favour. Otherwise, the Government must be in a position to place before this House all points for consideration. I request you to kindly answer every one of my points so that we can correctly assess the necessity for the expenditure.

*ಶ್ರೀ ಬಿ. ಹುಚ್ಚೇಗೌಡ.—ಶ್ರೀ ಟಿ. ತಿಮ್ಮಯ್ಯನವರನ್ನ foreign studies ಗೆ ಕಳುಹಿಸಿರುವ ವಿಚಾರವಾಗಿ ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ಯರು ಆಕ್ಷೇಪಿಸಿದರು; ಚಿಕ್ಕ ವಯಸ್ಸಿನವರನ್ನೂ, ಕೇವಲ ಕಡಿಮೆ ಸರ್ವಿಸ್ ಹಾಕಿರುವವರನ್ನೂ, ಅದರಲ್ಲಿಯೂ ಹಂಗಾಮಿಯಾಗಿ ಸರ್ವಿಸ್‌ನಲ್ಲಿರುವವರನ್ನೂ ಕಳುಹಿಸಿದ್ದೀರಿ ಎಂದು ಅವರು ಹೇಳಿದರು. ಇನ್ನೇನು 2-3 ವರ್ಷದಲ್ಲಿ ರಿಟೈರ್ ಆಗುತ್ತಾರೆ ಎಂಬಂಥವರನ್ನು ಇಂಥ ವ್ಯಾಸಂಗಕ್ಕೆ ಕಳುಹಿಸುವ ಬದಲು . . . .

Mr. SPEAKER.—Are you opposing?

ಶ್ರೀ ಬಿ. ಹುಚ್ಚೇಗೌಡ.—Not exactly opposing. But I want to throw some light on this subject. ಚಿಕ್ಕ ವಯಸ್ಸಿನವರನ್ನು ಇಂಥ ವಿದ್ಯಾ ವ್ಯಾಸಂಗಕ್ಕೆ ಕಳುಹಿಸಿ, ಅವರು ಹೆಚ್ಚು ಪ್ರೌಢಿಮೆ ಪಡೆದು ಬಂದಮೇಲೆ ಅವರಿಗೆ ಈ ಇಲಾಖೆಯ ಅಧಿಕಾರ ವಹಿಸಿಕೊಡುವುದರಿಂದ ಹೆಚ್ಚಿನ ಉಪಯೋಗವಾಗುತ್ತದೆ. ಆ ರೀತಿ ಪಾಂಡಿತ್ಯ ಪಡೆದು ಬಂದವರು ಇಂಥ ಕೆಲಸಕ್ಕೆ ಹೆಚ್ಚು ಲಾಯಕ್ಕಾಗಿರುತ್ತಾರೆಂದು ನನ್ನ ಅಭಿಪ್ರಾಯ.

Sri A. G. RAMACHANDRA RAO.—In various ways persons are deputed for foreign studies. Some go under the Damodar Das scholarships, some under the Colombo Plan and some others are given scholarships from the U.S.A., etc., each under different set of circumstances, conveniences, and rights and privileges. Therefore, they are all not of the same category. The Government considered the whole aspect and also the method of recruiting these. So they appointed a committee for the purpose consisting of the Chief Secretary, the Director of Public Instruction and some other officers. Whenever these applications come, they scrutinise them. In this particular case, in the Geological Department there was dearth of fully trained candidates. It so happened that, probably he was the lucky man,—immediately he joined service he was selected and has been sent.

Sri S. SRINIVASA IYENGAR.—On a point of clarification. Were there no officers of sufficient experience and who have put in good many years of service who could have been deputed for the benefit of the department?

Sri A. G. RAMACHANDRA RAO.—The committee has considered all these aspects and has decided upon this candidate and therefore he was sent. That is all I can say.

Regarding the exact expenditure that has to be incurred we have raised the issue. It is only later we got the information and there has been some delay and we will try to avoid delay.

DEMAND No. 23—RURAL DEVELOPMENT.

40 A—Rural Development.

Sri V. VENKATAPPA (Channapatna).—Should we not know what happens to the cut motions?

Mr. SPEAKER.—They are not moved at all. The House has agreed that Members will speak on the subjects referred to in those cut motions which have been admitted but the cut-motions will not be moved. The House has approved of the procedure and I am proceeding on that basis.

Sri M. MADIAH (Nanjangud—Scheduled Castes).—I want to know from the Chair whether a member who

has not tabled any cut motion is allowed to speak on each demand.

Mr. SPEAKER.—On the subject-matter of the particular cut motion.

Speedy execution of Rural works.

*ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ).—ಸ್ವಾಮಿ, 13ನೆಯ ನಂಬರಿನ ಖೋತಾ ಸೂಚನೆಯ ಉದ್ದೇಶ ಇಷ್ಟು. ನಾವು ಈ ಸಭೆಗೆ ಪ್ರತಿನಿಧಿಗಳಾಗಿ ಬಂದಲಾಗಾಯ್ತು ಈ ಅವಧಿಯಲ್ಲಿ ಸರ್ಕಾರದವರು ಕೆರೆಕಟ್ಟೆಗಳಿಗಾಗಿ ಮತ್ತು ಕುಡಿಯುವ ನೀರಿನ ಭಾವಿಗಳಿಗಾಗಿ ಹಣವನ್ನೊದಗಿಸಿರುವುದು ನೋಡಿ ನೋಡಿ ನಿರಾಶೆಯುಂಟಾಗಿದೆ. ಈ 2½ ವರ್ಷಗಳ ಕಾಲಾವಧಿಯ ಅನುಭವವನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಕೊಂಚ ದೊಡ್ಡ ಮನಸ್ಸುಮಾಡಿ ಹೋದವರ್ಷ ಸರ್ಕಾರದವರು ಈ ಬಾಬಿಗಾಗಿ ಹೆಚ್ಚಿಗೆ ಹಣವನ್ನೊದಗಿಸಿದ್ದರು. ಆದರೂ ಸಹ ಆ ಹೆಚ್ಚಿಗೆ ಹಣ ಒದಗಿಸಿದ್ದುದು pending listನಲ್ಲಿ ದಾಖಲಾಗಿ ಲ್ಯಾಪ್ಸ್ ಆಯಿತೇ ಹೊರತು ಹೆಚ್ಚಿನ ಕಾರ್ಯವನ್ನು ಸಾಗಿಸಿದಂತಾಗಲಿಲ್ಲ ಎಂಬುದನ್ನು ತಿಳಿಸಲು ನನಗೆ ವಿಷಾದವಾಗುತ್ತದೆ. ತಾವು ಯಾವುದಾದರೂ ಬಾಬಿಗೆ ಹಣವನ್ನೊದಗಿಸಿದ ವರ್ಷದಲ್ಲಿ ಅದು ನ್ಯಾಯವಾದ ರೀತಿಯಲ್ಲಿ ಬಾಬಿಗಾಗಿ ಖರ್ಚಾಗಿ ತಾವು ಯಾವ ಉದ್ದೇಶಕ್ಕಾಗಿ ಹಣವನ್ನೊದಗಿಸಿದರೋ ಅದು ಸಫಲಗೊಳ್ಳಬೇಕು. ಆಗಲೇ ತಾವು ಒದಗಿಸಿದ ಹಣದ ಸಾರ್ಥಕತೆಯನ್ನು ಪಡೆಯಲು ಸಾಧ್ಯವಾಗುವುದು. ಹೀಗಾದರೆ, ಪ್ರತಿನಿಧಿಗಳಾದ ನಾವು ತಮ್ಮಲ್ಲಿ ಬಂದು ನಮ್ಮ ಚುನಾವಣಾಕ್ಷೇತ್ರದ ಕುಂದುಕೊರತೆಗಳನ್ನು ಹೇಳಿಕೊಂಡರೆ, ಅದಕ್ಕಾಗಿ ತಾವು ಹಣವನ್ನೊದಗಿಸಿಯೂ ಅದು ಖರ್ಚಾಗದೆ ಹಾಗೆಯೇ ಉಳಿತಾಯವಾಗಿ ಹೋದರೆ ನಮ್ಮನ್ನು ಅವರು ನಿರ್ಲಕ್ಷ್ಯದಿಂದ ನೋಡುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯಬಗ್ಗೆ ಮೂರು ವರ್ಷಗಳ ಯೋಜನೆಯೊಂದನ್ನು ಹಾಕಿಕೊಂಡು ಪಟ್ಟಣಗಳಿಗೆ ಸೌಕರ್ಯ ಒದಗಿಸುವಂತೆ ಮಾಡಿದರೆ ಅನುಕೂಲ.

ಹಳ್ಳಿಗಾಡಿನಲ್ಲಿ ಯಾವಾಗಲೂ ಹಳ್ಳಿಯವರಿಗೆ ತಾವು ವಿದ್ಯುಚ್ಛಕ್ತಿ ಮೂಲಕವೋ ಅಥವಾ ಇನ್ನಾವುದಾದರು ಮೂಲಕವೋ ನೀರನ್ನು ಒದಗಿಸುವ ಏರ್ಪಾಡು ಮಾಡುತ್ತೇವೆ ಎಂದು ಮುಂದೆ ಬಂದರೆ ಅಂಥ ಸಂದರ್ಭದಲ್ಲಿ ಹಳ್ಳಿಗಾಡಿನ ಜನರು 1/3 ಭಾಗವನ್ನೂ, ಸರ್ಕಾರದವರು 1/3 ಭಾಗವನ್ನೂ, ಆಯಾ ಜಿಲ್ಲಾ ಬೋರ್ಡಿನವರು 1/3 ಭಾಗವನ್ನೂ ಕೊಡಬೇಕು, ಕೊಟ್ಟಲ್ಲಿ ತಕ್ಷಣ ಮಂಜೂರುಮಾಡುತ್ತೇವೆ ಎಂಬ ಒಂದು ಯೋಜನೆಯನ್ನು ತಯಾರುಮಾಡಿದ್ದೀರಿ ಎಂದು ಕೇಳಿದೆ. ಆದರೆ ಅದು ಸಮರ್ಪಕವಾಗಿ ಕೆಲಸಮಾಡುತ್ತಿಲ್ಲ. ಆ ಯೋಜನೆಯಿಂದ ಇಲ್ಲಿಯವರೆಗೂ ಯಾರೂ ಕೂಡ ಪ್ರಯೋಜನ ಹೊಂದಿಲ್ಲ. ಅದಕ್ಕೆ ಕಾರಣವೇನೆಂದರೆ ಅದರಲ್ಲಿರತಕ್ಕ ಲೋಪದೋಷಗಳೇ ಕಾರಣ. ಏಕೆಂದರೆ ಯಾವ ಜಿಲ್ಲಾ ಬೋರ್ಡೂ ಸಹ ಹೆಚ್ಚಿನ ರೀತಿಯಲ್ಲಿ ಹಣವನ್ನು ಈ ಯೋಜನೆಗಳಿಗೆ ಕೊಡತಕ್ಕ ಸನ್ನಿವೇಶದಲ್ಲಿ ಇಲ್ಲ. ಇದೇ ನನ್ನ ಖೋತಾನಿರ್ಣಯದಲ್ಲಿರುವ ಮುಖ್ಯವಾದ ಸಮಸ್ಯೆ. ಇದನ್ನು ಜಾಗ್ರತೆ, ಮುಂದಿನ ಬಡ್ಜೆಟ್ ಸಮಯದಲ್ಲಾದರೂ ಇನ್ನೂ ಹೆಚ್ಚಿನ ರೀತಿಯಲ್ಲಿ ಸಾಧ್ಯವಾದರೆ ಒಂದು ಸ್ಕೀಂ ಆದರೂ ತಯಾರಿಸಿ ಬಗೆಹರಿಸಬೇಕೆಂದು ಹೇಳಿ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

Necessity for proper Planning with respect to well works.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಈಗತಾನೆ ಶ್ರೀ ಶಿವಪ್ಪನವರು ಗ್ರಾಮಾಂತರಗಳ ವಿಷಯಗಳನ್ನೆಲ್ಲಾ ವಿಶದೀಕರಿಸಿ ಮಾತನಾಡಿದ್ದಾರೆ. ಇದರಲ್ಲಿ ಮುಖ್ಯವಾದ ಅಂಶ ಏನೆಂದರೆ ; ರೆವೆನ್ಯೂ ಅಧಿಕಾರಿಗಳು ತಮಗೆ ಮಂಜೂರಾಗಿ ಹಣ ಬಂದಿದ್ದರೂ, ಕಾಲಕ್ಕೆ ಸರಿಯಾಗಿ ಕಂಟ್ರಾಕ್ಟುಗಳನ್ನು ಕೊಟ್ಟು ಆ ಹಣ ಎಷ್ಟಿದೆ, ಹೇಗೆ ಕೆಲಸಮಾಡಬೇಕು, ಎಷ್ಟು ತೀವ್ರವಾಗಿ ಕೆಲಸಮಾಡಬೇಕು ಎಂಬ ಒಂದು ಯೋಜನೆಯನ್ನು ಮಾಡಿಕೊಳ್ಳದೆ, ಹಣ ಲ್ಯಾಪ್ಸ್ ಆಗುತ್ತದೆ ಎಂದು ಹೇಳಿ ಮಾರ್ಚಿ ತಿಂಗಳಿನಲ್ಲಿ ಕಂಟ್ರ್ಯಾಕ್ಟು ಕೊಟ್ಟು ಆ ಕಂಟ್ರ್ಯಾಕ್ಟರು ಕೊಡತಕ್ಕ ಬಿಲ್ಲಿನ ಹಣವನ್ನು ಕೊಡುವುದಕ್ಕೆ ಮಾತ್ರ ಪ್ರಯತ್ನವಾಗುತ್ತಾ ಇದೆ ; ಇದು ಅನೇಕ ವರ್ಷಗಳಿಂದ ನಡೆದುಕೊಂಡು ಬರುತ್ತಾ ಇದೆ. ಇದು ತಮಗೂ ಗೊತ್ತಿದೆ. ಹಿಂದಿನ ವರ್ಷಗಳಲ್ಲಿ ನಡೆದಿರುವ ಕೆಲಸಗಳಿಗಾಗಿ ಈ ವರ್ಷದ ಮೊಬಲಗನ್ನು ಉಪಯೋಗಿಸಬೇಕಾಗುತ್ತದೆ. ಹೊಸದಾಗಿ ಹಣ ಕೊಡುವುದಿಲ್ಲ ಎಂದು ತಾವು ಹೇಳಿದ್ದರೂ, ಅದನ್ನು ತಿಳಿದುಕೊಂಡೂ ಕೂಡ ರೆವಿನ್ಯೂ ಅಧಿಕಾರಿಗಳು ಒಂದು ಕ್ರಮವನ್ನನುಸರಿಸಿ ಈ ವರ್ಷ ಎಷ್ಟು ಬಾವಿಗಳನ್ನು ಮಾಡಿಸಿದರೆ ಅನುಕೂಲವಾಗುತ್ತದೆ, ಮಂಜೂರಾಗಿ ಬಂದಿರುವ ಹಣ ಎಷ್ಟು ಉಪಯೋಗಿಸಿಕೊಳ್ಳಬೇಕು ಎಂಬ ವಿವೇಚನೆಯಿಂದ ಕೆಲಸಮಾಡುವ ಹಾಗೆ ಕಂಡು ಬರುತ್ತಾ ಇಲ್ಲ. ನೋಡಿ, ಈಗಾಗಲೇ ನಾಲ್ಕೈದು ತಿಂಗಳಾಗಿವೆ, 19 ಲಕ್ಷ ರೂಪಾಯಿ ಗ್ರಾಂಟು ಕೊಡುತ್ತಾರೆ, ಈ ಯೋಜನೆಯನ್ನು ಕೈಕೊಳ್ಳುತ್ತೇವೆ ಎಂದು ಹೇಳುತ್ತಾ ಇದ್ದೀರಿ. ನಮ್ಮ ಮುಂದೆ ಇಟ್ಟಿರುವ ಪ್ರಕಾರ, ಇವೊತ್ತು ಮಂಜೂರಾತಿ ದೊರೆತರೂ ಕೂಡ ರೆವಿನ್ಯೂ ಅಧಿಕಾರಿಗಳಿಗೆ ತಿಳಿವಳಿಕೆ ಕೊಡತಕ್ಕದ್ದು ಜನವರಿ ಅಥವಾ ಫೆಬ್ರುವರಿಯಲ್ಲಿ. ಅಷ್ಟುಕಾಲ ಆಗುತ್ತದೆ. ಆಗ ಮಾರ್ಚಿ ತಿಂಗಳಿನಲ್ಲಿ ಈ ಹಣ ಲಾಪ್ಸ್ ಆಗುತ್ತದೆ ಎಂದು ಹೇಳಿ ನೆಪಮಾತ್ರಕ್ಕೆ ಕಾಂಟ್ರ್ಯಾಕ್ಟ್ ಕೊಟ್ಟು, ನಾಲ್ಕು ಕಲ್ಲು ತಂದು ಹಾಕಿದರೂ ಕೆಲಸ ಆಯಿತು ಎಂದು ಹೇಳಿ ಆ ಕಂಟ್ರಾಕ್ಟರಿಗೆ ಹಣ ಕೊಡುತ್ತಾರೆ. ಆಮೇಲೆ ಮತ್ತೆ ಪುನಃ ಈ ಬಾವಿ ಕೆಲಸ ಮಾಡಬೇಕಾದರೆ ಅಕ್ಟೋಬರ್, ನವೆಂಬರ್ ತಿಂಗಳಿನಲ್ಲಿ ಪ್ರಾರಂಭಮಾಡಬೇಕಾಗುತ್ತದೆ. ಒಂದು ವೇಳೆ ಮಳೆ ಬರುವಹೊತ್ತಿಗೇ ಮೂರು ತಿಂಗಳಿನಲ್ಲಿ ಎಂದರೆ ಏಪ್ರಿಲ್, ಮೇ, ಜೂನ್ ತಿಂಗಳಲ್ಲಿ ಎಲ್ಲಾ ಕೆಲಸಮಾಡಿ ಮುಗಿಸಬೇಕೆಂದರೆ ಸರ್ಕಾರದ ಮಂಜೂರಾತಿ ಬಂದನಂತರ ಮಾಡುತ್ತೇವೆ ಎಂದು ಹೇಳುತ್ತಾರೆ. ಹೀಗೆ ಮೂರು, ನಾಲ್ಕು, ಐದು ವರ್ಷಗಳಾದರೂ ಕೂಡ ಒಂದು ಭಾವಿಯನ್ನು ಕಟ್ಟುವುದಕ್ಕೆ ಆಗುತ್ತಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ಸರಿಯಾದ ಯೋಜನೆಯನ್ನಿಟ್ಟುಕೊಂಡು ಕೆಲಸಮಾಡುವುದಕ್ಕೆ ಮೇಲಿನ ಅಧಿಕಾರಿಗಳು ಪ್ರಯತ್ನಮಾಡುತ್ತಾ ಇಲ್ಲ. ಮೊದಲು ರೂರಲ್ ಡೆವಲಪ್‌ಮೆಂಟ್ ಕಮಿಟಿ ಇತ್ತು. ಆಗ ಅನೇಕ ಸಂದರ್ಭಗಳಲ್ಲಿ ಗ್ರಾಮಸ್ತರೇ ಸರಿಯಾದ ಕಂಟ್ರಾಕ್ಟರುಗಳ ಮೂಲಕ ಕೆಲಸಮಾಡಿಸುತ್ತಾ ಇದ್ದರು. ಈಗ ಏನಾಗಿದೆ, ಬಡ್ಜೆಟ್‌ನಲ್ಲಿ ಹಣ ಮಂಜೂರಾಯಿತು ಇಂಥ ಕಡೆ ಬಾವಿ ಮಾಡಿಸಬೇಕು ಎಂದ ತಕ್ಷಣವೇ ಅದನ್ನು ತಿಳಿದುಕೊಂಡು ಯಾವುದೋ ಒಂದು ಹಳ್ಳಿಯಲ್ಲಿರತಕ್ಕ ಒಬ್ಬ ಕಂಟ್ರಾಕ್ಟರು ರೆವಿನ್ಯೂ ಅಧಿಕಾರಿಗಳ ಹತ್ತಿರ ಹೋಗಿ ಆ ಕಂಟ್ರಾಕ್ಟು ಪಡೆದು

ಕೊಳ್ಳುತ್ತಾನೆ. ನಮಗೆ ಕೆಲಸ ಇಲ್ಲ, ಕೆಲಸ ಕೊಡಿ ಎಂದು ಅಲ್ಲಿನ ಗ್ರಾಮಸ್ತರೇ ಎರಡು ಮೂರು ವರ್ಷಗಳಿಂದ ಕೇಳುತ್ತಾ ಇದ್ದರೂ ಕೂಡ ಅವರಿಗೆ ಸಿಕ್ಕುತ್ತಿಲ್ಲ. ಯಾವುದೋ ಊರಿನಿಂದ, ಎಲ್ಲಿಂದಲೋ ಬರತಕ್ಕ ಕಂಟ್ರಾಕ್ಟರನಿಗೆ ಏನು ಅಭಿಲಾಷೆ ಇರುತ್ತದೆ? ಏನಾದರೂ ಮಾಡಿ ಹಣ ಉಳಿಸಬೇಕು, ಹೆಚ್ಚಿನ ಲಾಭ ಪಡೆಯಬೇಕು ಎಂದು ಇರುತ್ತದೆಯೇ ವಿನಾ ಹಳ್ಳಿಯವರಿಗೆ ಜಾಗ್ರತೆ ಕುಡಿಯುವ ನೀರಿನ ಸೌಕರ್ಯ ಮಾಡಿಕೊಡಬೇಕು, ಇರತಕ್ಕ ನೀರಿನ ತೊಂದರೆಯನ್ನು ಪರಿಹಾರ ಮಾಡಬೇಕು ಎಂಬ ಅಭಿಲಾಷೆ ಇರುವುದಿಲ್ಲ. ರೆವಿನ್ಯೂ ಅಧಿಕಾರಿಗಳೂ ಕೂಡ ಅದನ್ನು ಪರಿಶೀಲನೆ ಮಾಡದೆ, ಎಂತಹ ಕಂಟ್ರಾಕ್ಟರಿಗೆ ಕೊಡಬೇಕು, ಟೆಂಡರ್ ಕೊಟ್ಟಿರುವುದು ಹೆಚ್ಚೇ, ಕಡಿಮೆಯೆ, ಯಾವ ರೀತಿ ಕೆಲಸಆಗುತ್ತದೆ, ಆತನು ಕೊಟ್ಟಿರತಕ್ಕ ರೇಟಿಗೂ ಇತರರ ರೇಟಿಗೂ ಹೇಗಿದೆ, ಕಾಂಪಿಟೇಟಿವ್ ಆಗಿದೆಯೇ, ಅವನು ಕೊಟ್ಟ ರೇಟಿನಂತೆ ಕೆಲಸಮಾಡುತ್ತಾನೆಯೇ ಎಂಬುದು ಯಾವುದನ್ನೂ ನೋಡದೆಯೇ, ಕಂಟ್ರಾಕ್ಟು ಕೊಡುತ್ತಾರೆ. ಆದ್ದರಿಂದ ಇನ್ನು ಮುಂದೆ ರೆವಿನ್ಯೂ ಅಧಿಕಾರಿಗಳು ಒಂದು ಯೋಜನೆಯನ್ನು ಮಾಡಿಕೊಂಡು ಗ್ರಾಮಸ್ತರು ಬಾವಿ ತೆಗೆಯುತ್ತೇವೆ ಎಂದರೆ ಅವರಿಗೇ ಕಂಟ್ರಾಕ್ಟ್ ಕೊಟ್ಟು ಅವರಿಂದಲೇ ಆ ಕೆಲಸವನ್ನು ಮಾಡಿಸತಕ್ಕ ಅಭಿಪ್ರಾಯವನ್ನು ಪರಿಶೀಲನೆ ಮಾಡಬೇಕು.

ಇನ್ನೊಂದು ಅಂಶವೇನೆಂದರೆ ಈ ವರ್ಷ ಗ್ರಾಂಟ್ ಹಣ ಮಂಜೂರಾಯಿತು ಎಂದರೆ ಅದು ಲ್ಯಾಪ್ಸ್ ಆಗಲಿ ಆಗದೇ ಇರಲಿ ನಿರ್ದಿಷ್ಟವಾಗಿ ಮಂಜೂರಾಗಿರತಕ್ಕ ಆ ಹಣ ಟ್ರೆಜರಿಯಲ್ಲಿ ಕ್ರೆಡಿಟ್ ಮಾಡಬೇಕು. ಅದನ್ನು ಸುಮ್ಮನೆ ಪಿ. ಡಬ್ಲ್ಯು. ಡಿ. ಇಲಾಖೆಯವರಿಂದಲೋ ಅಥವಾ ಇನ್ನಾವ ಇಲಾಖೆಯಿಂದಲೋ ಲ್ಯಾಪ್ಸ್ ಆಯಿತು ಎಂದು ಹೇಳಿ ರದ್ದುಪಡಿಸುವುದು ಸರಿಯಲ್ಲ. ಹಣವನ್ನು ಮಂಜೂರುಮಾಡುತ್ತೀರಿ. ಅದನ್ನು ಆ ಕಾರ್ಯಗಳಿಗಾಗಿ ಪ್ರತ್ಯೇಕವಾಗಿಟ್ಟು ಮುಂದಿನ ಬಡ್ಜೆಟ್‌ನಲ್ಲಿ ಅದು ಪುನಃ ಬರದಹಾಗೆ ಮಾಡಿದರೆ ಆ ಕೆಲಸಕಾರ್ಯಗಳು ಆಗುತ್ತವೆಯೇ ವಿನಾ 13 ಲಕ್ಷ ರೂಪಾಯಿ ಕೊಟ್ಟಿದ್ದೇವೆ, 20 ಲಕ್ಷ ರೂಪಾಯಿ ಮಂಜೂರುಮಾಡಿದ್ದೇವೆ, ಎಂದು ಹೇಳಿ ಸಾಲ್ ಆಖೈರಿನಲ್ಲಿ ಕೆಲಸ ಮುಗಿಯಲಿಲ್ಲ ಎಂದು 10 ಲಕ್ಷ ರೂಪಾಯಿ ಲಾಪ್ಸ್ ಮಾಡತಕ್ಕ ಕ್ರಮ ಸರಿಯಲ್ಲ. ಕೇಂದ್ರ ಸರ್ಕಾರದ ಹಣ ಬರುತ್ತದೆ ಎಂದು ನಿರೀಕ್ಷಣೆ ಮಾಡಿದ್ದೀರಿ. ವಾಸ್ತವ. ಅಷ್ಟರಲ್ಲಿ ಎಂದರೆ 20 ಲಕ್ಷ ರೂಪಾಯಿಗಳಲ್ಲಿ 10 ಲಕ್ಷ ರೂಪಾಯಿಗಳನ್ನಾದರೂ ಖರ್ಚು ಮಾಡತಕ್ಕ ಸಂದರ್ಭ ಇತ್ತು. ಇವೊತ್ತು 19 ಲಕ್ಷದ 50 ಸಾವಿರ ರೂಪಾಯಿ ಗ್ರಾಂಟು ಬರುತ್ತದೆ, ಅದನ್ನು ಮಂಜೂರುಮಾಡಿ ಕೆಲಸವನ್ನು ಮಾಡಿಸುತ್ತೇವೆ ಎಂದರೆ ಈ ಐದು ತಿಂಗಳುಗಳಿಂದ ಯಾವಯಾವ ಮುನಿಸಿಪಾಲಿಟಿಗಳಲ್ಲಿ, ಯಾವಯಾವ ಊರಿನಲ್ಲಿ ಕುಡಿಯುವ ನೀರಿನ ಅನುಕೂಲ ಬೇಕು ಎಂದು ಕೇಳಿದ್ದೀರಿ? 50 ಸಾವಿರ ರೂಪಾಯಿ ಮಂಜೂರು ಮಾಡುತ್ತೇವೆ ಎಂದು ಹೇಳುತ್ತೀರಲ್ಲಾ ಅದೇ ರೀತಿ ಎಷ್ಟೆಷ್ಟು ಕಡೆ ಬಾವಿಗಳಿಲ್ಲ, ಎಲ್ಲೆಲ್ಲಿ ಕುಡಿಯುವ ನೀರಿನ ಅನುಕೂಲ ಬೇಕು ಎಂಬ ವರದಿ ತರಿಸಿಕೊಂಡಿದ್ದೀರಾ? ಏನೂ ಇಲ್ಲ. ಪ್ರತಿವರ್ಷವೂ ನಾವು ಕೇಳುತ್ತಲೇ ಇರುವುದು ತಾವು ಒಂದು ಉತ್ತರ ಹೇಳುವುದು—ಇದು ಸರಿಯಾದ ಕ್ರಮವಲ್ಲ. ಪ್ರತಿಯೊಂದು ತಾಲ್ಲೂಕಿನಲ್ಲೂ ಕೂಡ ಏನೇನು ಅನುಕೂಲತೆಗಳು ಬೇಕು ಎಂಬುದಕ್ಕೆ ನಿರ್ದಿಷ್ಟವಾದ ಯೋಜನೆ ಮಾಡಿಕೊಂಡು ಆಯಾ ಗ್ರಾಮಸ್ತರಿಂದಲೇ ಆಯಾ ಕೆಲಸ ಮಾಡಿಸಬೇಕು. ಕಮ್ಯೂನಿಟಿ ಪ್ರಾಜೆಕ್ಟು ಮತ್ತು ನ್ಯಾಷನಲ್ ಎಕ್ಸ್‌ಟೆನ್ಷನ್ ಸ್ಕೀಂ ಏರಿಯಾದಲ್ಲಿ ಆಯಾ ಗ್ರಾಮಸ್ತರೇ ಮಣ್ಣಿನಕೆಲಸ ಮಾಡಬೇಕು. ಕಲ್ಲು, ಸಿಮೆಂಟು ಕೊಡುತ್ತೇವೆ, ಮಧ್ಯೆ ಕಲ್ಲು ಬಂದಲ್ಲಿ ಡೈನಾಮೈಟ್ ಹೊಡೆಯುತ್ತೇವೆ ಎಂದು ಹೇಳುವ ಪ್ರಕಾರ, ಆ ಜನಗಳ ಕೈಯಿಂದಲೇ ಆಯಾ ಕೆಲಸ ಮಾಡಿಸುವ ಯೋಜನೆ ಇದೆ. ಅದೇ ರೀತಿ ಇದನ್ನು ಕೂಡ ಅಲ್ಲಿನ ಜನಗಳನ್ನೇ ತೆಗೆದುಕೊಂಡು ಈ ವರ್ಷ ಮಂಜೂರುಮಾಡಿದ ಹಣವನ್ನು ಪ್ರತ್ಯೇಕವಾಗಿ ಖಜಾನೆಯಲ್ಲಿಟ್ಟು, ಅದು ಲ್ಯಾಪ್ಸ್ ಆಗದ ರೀತಿಯಲ್ಲಿ ನೋಡಿಕೊಂಡು ಕೆಲಸ ಮಾಡಿಸಬೇಕೆಂದು ಹೇಳಿ ಈ ಖೋತಾ ನಿರ್ಣಯವನ್ನು ತಮ್ಮ ಮುಂದೆ ಇಟ್ಟಿದ್ದೇನೆ.

Necessity to provide wells in Nelamangala, Dodballapur and Magadi Taluks.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಮಾನ್ಯ ಅಧ್ಯಕ್ಷರೇ, ಶ್ರೀ ಶಿವಪ್ಪನವರು ಗ್ರಾಮಾಂತರ ಪ್ರದೇಶದ ಕುಡಿಯುವ ನೀರಿನ ಬಾವಿಗಳ ವಿಷಯವನ್ನು ಬಹಳ ಚೆನ್ನಾಗಿ, ವಿವರವಾಗಿ ಹೇಳಿದ್ದಾರೆ. ಇದು ಬಹಳ ಪ್ರಾಮುಖ್ಯವಾದದ್ದು. ಇವೊತ್ತು ನಾವು ಈ ಒಂದು ಪ್ರಜಾಸರ್ಕಾರವನ್ನು ರಚಿಸಿ ಇಷ್ಟು ದಿವಸ ಆದರೂ ಕೂಡ ಹಳ್ಳಿ ಜನಗಳಿಗೆ ಕುಡಿಯುವ ನೀರಿನ ಸಹಾಯ ಒದಗಿಸದೇ ಇದ್ದರೆ ನಾವು ಅವರಿಗೆ ಎಷ್ಟು ಅನ್ಯಾಯಮಾಡಿದಂತಾಗುತ್ತದೆ ಎಂಬುದನ್ನು ಯೋಚನೆಮಾಡಬೇಕು. ಮುಖ್ಯವಾಗಿ ಕುಡಿಯುವ ನೀರು ಪ್ರತಿಯೊಬ್ಬ ಮನುಷ್ಯನಿಗೂ ಅತ್ಯವಶ್ಯಕವಾಗಿ ಬೇಕಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಬಾವಿಗಳಿಲ್ಲದೆ ಬಹಳ ಕಷ್ಟವಾಗಿದೆ. ಅನೇಕ ಗ್ರಾಮಗಳಲ್ಲಿ ನೀರನ್ನು ಬಹಳ ದೂರದಿಂದ ಎಂದರೆ ಸುಮಾರು 1-1½ ಮೈಲಿ ದೂರದಿಂದ ತರುತ್ತಾ ಇರುವುದನ್ನು ನೋಡಿದರೆ ನಮಗೆ ಬಹಳ ವ್ಯಸನವಾಗುತ್ತದೆ. ಇದನ್ನು ತಪ್ಪಿಸಬೇಕಾದರೆ ಮುಖ್ಯವಾಗಿ ಮುನಿಸಿಪಾಲಿಟಿ ಮತ್ತು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಯಾವ ರೀತಿ ನೀರಿನ ಸೌಕರ್ಯದ ಏರ್ಪಾಡುಮಾಡಿದ್ದೀರೋ ಅದೇ ರೀತಿ ಗ್ರಾಮಾಂತರ ಪ್ರದೇಶಗಳಲ್ಲೂ ಕೂಡ ಪ್ರತಿಯೊಂದು ತಾಲ್ಲೂಕಿನಲ್ಲೂ ಕುಡಿಯುವ ನೀರಿನ ಅವಶ್ಯಕತೆ ಎಲ್ಲೆಲ್ಲಿದೆಯೋ ಅಲ್ಲೆಲ್ಲಾ ಒಂದು ಯೋಜನೆ ತಯಾರುಮಾಡಿ, ಆ ಯೋಜನೆಯ ಆಧಾರದಮೇಲೆ ಕೆಲಸಕಾರ್ಯಗಳನ್ನು ಮಾಡಿ. ಕುಡಿಯುವ ನೀರಿನ ಅವಶ್ಯಕತೆ ಪ್ರತಿಯೊಂದು ತಾಲ್ಲೂಕಿನಲ್ಲೂ ಮುಖ್ಯವಾದದ್ದಾಗಿದೆ. ಅದನ್ನು ಎಲ್ಲರೂ ಸೇರಿ ಪರಿಶೀಲನೆಮಾಡಿ ಅದಕ್ಕೆ ತಕ್ಕಷ್ಟು ಹಣವನ್ನು ಬಡ್ಜೆಟ್‌ನಲ್ಲಿ ಸೇರಿಸಬೇಕಾದದ್ದು ನಮ್ಮ ಕರ್ತವ್ಯ. ಜನಗಳಿಗೆ ಯಾವ ಸೌಕರ್ಯವನ್ನೂ ಮಾಡಿಕೊಡದೇ ಇದ್ದರೂ ಕೂಡ ಕೊನೆಯಪಕ್ಷ ನೀರಿನ ಸೌಕರ್ಯವನ್ನಾದರೂ ಮಾಡಿಕೊಡಬೇಕಾದದ್ದು ನಮ್ಮ ಆದ್ಯ ಕರ್ತವ್ಯ. ಆದ್ದರಿಂದ ಇದು ಬಹಳ ಪ್ರಾಮುಖ್ಯವಾದದ್ದು. ಸರ್ಕಾರದವರು ಸಹಾನುಭೂತಿಯಿಂದ ಈ ಕುಡಿಯುವ ನೀರಿನ ಸಮಸ್ಯೆಯನ್ನು ಕಡೆಯಪಕ್ಷ ಎರಡು ವರ್ಷಗಳೊಳಗಾದರೂ ಪರಿಹರಿಸಿ ಆ ಕೊರತೆ ಇಲ್ಲದಂತೆ ಮಾಡುತ್ತೀರಿ ಎಂದುನಂಬಿದ್ದೇನೆ.

Unsatisfactory condition of Rural Development works after abolition of Rural Development Board.

*ಶ್ರೀ ಕೆ. ಲಕ್ಕಪ್ಪ (ಚನ್ನರಾಯಪಟ್ಟಣ).—ಗ್ರಾಮಾಂತರ ಪ್ರದೇಶಗಳಲ್ಲಿ ನೀರಿನ ಅವಶ್ಯಕತೆಯನ್ನು ಜರೂರಾಗಿ ಈಡೇರಿಸುವುದು ಅತ್ಯವಶ್ಯಕ ಎಂಬುದು ನಿರ್ವಿವಾದವಾದ ವಿಚಾರ. ಇದರ ಅವಶ್ಯಕತೆಯನ್ನು ಸರ್ಕಾರದವರು ಅರಿತು ಇದನ್ನು ಒಂದು ಯೋಜನೆಯ ಮೂಲಕ, ಕ್ರಮವಾದ ಒಂದು ನೀತಿಯನ್ನು ಅನುಸರಿಸುತ್ತಾ ಬರುತ್ತಿದ್ದರು. ಆ ನೀತಿ ರೂರಲ್ ಡೆವಲಪ್‌ಮೆಂಟ್ ಕಮಿಟಿ ಇದ್ದಂಥ ಕಾಲದಲ್ಲಿ ಬಹಳ ಯಶಸ್ವಿಯಾಗಿ ಅನುಸರಿಸಲ್ಪಟ್ಟು, ಕೆಲಸಕಾರ್ಯಗಳು ಒಂದು ಕ್ರಮದಿಂದ ನಡೆಯುತ್ತಾ ಇದ್ದವು. ಒಂದು ಜಿಲ್ಲೆಗೆ ನೀರಿನ ಬಾವಿಗಳಿಗಾಗಿ ಇಷ್ಟು ಹಣ ಬೇಕು ಎಂದು ಹೇಳಿ ಸರ್ಕಾರದವರು ಒದಗಿಸುತ್ತಾ ಇದ್ದರು. ಅದನ್ನು ಆಯಾ ಡಿಸ್ಟ್ರಿಕ್ಟುಗಳಲ್ಲಿದ್ದಂಥ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕಮಿಟಿಯವರು ಪ್ರತಿಯೊಂದು ತಾಲ್ಲೂಕಿಗೂ ಸರಿಸಮಾನವಾಗಿ ಸ್ವಲ್ಪ ಹೆಚ್ಚು ಕಡಮೆ ಇಷ್ಟಿಷ್ಟು ಹಣ ಒದಗಿಸಬೇಕೆಂದು ಒದಗಿಸುತ್ತಾ ಇದ್ದರು. ಅನಂತರ ಆ ತಾಲ್ಲೂಕಿನಲ್ಲಿ ಎಷ್ಟು ಹಣ ಒದಗಿಸುತ್ತಿದ್ದರೋ ಅಷ್ಟು ಹಣವನ್ನೂ ಕ್ರಮವಾಗಿ ಎಲ್ಲಾ ಹೋಬಳಿಗಳಿಗೂ ಸರಿಹೋಗುವಂತೆ ಸರಿಯಾದ ರೀತಿಯಲ್ಲಿ ಕ್ರಮವಾಗಿ ವಿನಿಯೋಗಿಸುತ್ತಾ ಇದ್ದರು. ಒಮ್ಮೊಮ್ಮೆ ಹಣ ಸಾಲದೆ ಸರ್ಕಾರದವರಲ್ಲಿ ಹೆಚ್ಚಿಗೆ ಗ್ರಾಂಟ್ ಪಡೆದು ಆ ಕೆಲಸವನ್ನು ಸಕಾಲದಲ್ಲಿ ಪೂರೈಸಲು ಕಂಟ್ರಾಕ್ಟರುಗಳಿಗೆ ಹಣ ಒದಗಿಸಲು ತಕ್ಕ ಏರ್ಪಾಡು ಇತ್ತು. ಆದರೆ ಈ ರೂರಲ್ ಡೆವಲಪ್‌ಮೆಂಟ್ ಕಮಿಟಿಗಳನ್ನು ರದ್ದುಮಾಡಿದಮೇಲೆ ಈ ವಿಷಯದಲ್ಲಿ ಬಹಳ ಅವ್ಯವಸ್ಥೆಯಾಗಿದೆ ಎಂಬುದನ್ನು ದೃಷ್ಟಾಂತಗಳ ಮೂಲಕ ಸರ್ಕಾರದವರ ಗಮನಕ್ಕೆ ತರುವುದಕ್ಕಾಗಿ ನಿಂತಿದ್ದೇನೆ. ಈಗ ಸರ್ಕಾರದವರು ನಮಗೆ ಒಂದೊಂದು ಜಿಲ್ಲೆಯಲ್ಲಿ ಒಟ್ಟು ಎಷ್ಟು ಬಾವಿಗಳಿವೆ ಎಂಬ ಒಂದು ವರದಿಯನ್ನು ಕೊಟ್ಟಿದ್ದಾರೆ. ಅದನ್ನು ತೆಗೆದು ಕ್ರಮವಾಗಿ ನೋಡಿದಪಕ್ಷದಲ್ಲಿ ಕೆಲವು ಭಾಗಗಳಲ್ಲಿ ಹೆಚ್ಚು ಬಾವಿಗಳಿವೆ, ಕೆಲವು ಭಾಗಗಳಲ್ಲಿ ಬಾವಿಗಳೇ ಇಲ್ಲ, ಇನ್ನು ಕೆಲವು ಭಾಗಗಳಲ್ಲಿ ಸ್ವಲ್ಪ ಬಾವಿಗಳಿವೆ. ಇದಕ್ಕೆ ಏನು ಕಾರಣ ಎಂದರೆ, ಮೊದಲಿನಂತೆ ಈ ಕೆಲಸಕಾರ್ಯಗಳಲ್ಲಿ ಒಂದು ಹಿಡಿತ ಇಲ್ಲ. ಯಾರು ಉತ್ಸಾಹಿಗಳಾಗಿ, ಶ್ರದ್ಧೆವಹಿಸುವುದಿಲ್ಲವೋ ಅಂಥಹವರು ಇರುವಕಡೆ ಬಹಳ ಕಡಿಮೆ ಭಾಗದ ಕೆಲಸವಾಗಿದೆ, ಯಾರು ಸ್ವಲ್ಪ ಪ್ರಭಾವಯುತರಾಗಿದ್ದಾರೋ ಅಲ್ಲಿ ಹೆಚ್ಚು ಭಾಗದ ಕೆಲಸ ಆಗಿದೆ. ಈ ರೀತಿ ಅವ್ಯವಸ್ಥೆ ಆಗಿದೆ. ಜೊತೆಗೆ ಗ್ರಾಮದಲ್ಲಿ ಬಾವಿಗಳನ್ನು ತೆಗೆಸತಕ್ಕ ಕಂಟ್ರಾಕ್ಟರುಗಳೂ ಸಹ ಅನೇಕ ವಿಧವಾಗಿ ಅನ್ಯಾಯಮಾಡುತ್ತಾ ಇದ್ದಾರೆ. ಒಂದು ಬಾವಿ 50 ಅಡಿ ಆಳ ತೆಗೆಯಬೇಕೆಂದು ಅಂದಾಜು ಆಗಿದ್ದರೆ, ಅನೇಕ ಸಂದರ್ಭಗಳಲ್ಲಿ ನೋಡಿದ್ದೇವೆ, 45 ಅಡಿಗೇ ಮುಗಿಸಿ ಪೂರ್ತಿ ಆಯಿತು ಎಂದು ಬಿಲ್ ಪಾಸ್ ಮಾಡಿಸುವುದಕ್ಕೆ ಪ್ರಯತ್ನಮಾಡುತ್ತಾರೆ. ರೂರಲ್ ಡೆವಲಪ್‌ಮೆಂಟ್ ಕಮಿಟಿ ಇದ್ದಾಗ ಇಂಥ ಸಂದರ್ಭಗಳಲ್ಲಿ ಅಜಮಾಯಿಷಿಮಾಡಿಸಿ ಈ ವಿಧವಾದ ಅಕ್ರಮ ನಡೆಯದಹಾಗೆ ಒಂದು ವ್ಯವಸ್ಥೆಯನ್ನು ಮಾಡಿ ಕೆಲಸ ಜರುಗಿಸುತ್ತಾ ಇದ್ದರು. ಆದರೆ ಈಗ ಆ ರೀತಿಯಾದ ಮೇಲ್ವಿಚಾರಣೆ ಯಾವುದೊಂದೂ ಇಲ್ಲದೆ ಇರುವುದರಿಂದ ಹೀಗೆ ಅಕ್ರಮಗಳಾಗುತ್ತ ಇರುವುದು ನಮ್ಮ ಗಮನಕ್ಕೆ ಬರುತ್ತಾ ಇದೆ. ಅದೂ ಅಲ್ಲದೆ ಈಗ ನೀರಿನ ಬಾವಿಗಳಿಗಾಗಿ ಕೊಡುತ್ತಾ ಇರತಕ್ಕ ಹಣವೂ ಸಹ ಹಿಂದೆ ಒದಗಿಸುತ್ತಾ ಇದ್ದುದಕ್ಕೆ ಹೋಲಿಸಿ ನೋಡಿದರೆ ಇತ್ತೀಚೆಗೆ ಕಡಿಮೆಯಾಗುತ್ತಾ ಇದೆ. ಈ ಸಾಲಿನಲ್ಲಿ ಮತ್ತು ಹಿಂದಿನ ಸಾಲಿನಲ್ಲಿ ತೆಗೆಸಬೇಕಾಗಿದ್ದ ಬಾವಿಗಳಿಗೆ ಹಣವನ್ನು ಸರಿಯಾಗಿ ಒದಗಿಸದೆ ಈಗ 1-1½ ವರ್ಷದಿಂದ ಹಣ ಇಲ್ಲದೆ ಇನ್ನೂ ಆ ಕಾರ್ಯ ಆಗದೆ ಉಳಿದಿದೆ ಎಂಬುದನ್ನು ಕಳೆದ ಅಸೆಂಬ್ಲಿ ಸಂದರ್ಭದಲ್ಲಿ ಸರ್ಕಾರದವರ ಗಮನಕ್ಕೆ ತಂದಮೇಲೆ, ಈಗ ಹೆಚ್ಚು ಹಣ ಒದಗಿಸಿಕೊಂಡು ಹಿಂದೆ ಮಾಡದೇಇದ್ದ ಕೆಲಸಕ್ಕೆ ಕೊಡುವ ವ್ಯವಸ್ಥೆಮಾಡುತ್ತಾ ಇದ್ದಾರೆ. ರೂರಲ್ ಡೆವಲಪ್‌ಮೆಂಟ್ ಸಮಿತಿ ಇದ್ದಾಗ ಈ ರೀತಿ ಅಕ್ರಮಕ್ಕೆ ಅವಕಾಶವಾಗುತ್ತಾ ಇರಲಿಲ್ಲ. ಆದ್ದರಿಂದ ನಾನು ಈಗಲೂ ಸೂಚನೆ ಮಾಡುವುದು ಏನೆಂದರೆ: ಕ್ಷಿಪ್ರದಲ್ಲೇ ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ತಾಲ್ಲೂಕು ಬೋರ್ಡುಗಳನ್ನು ರಚನೆ ಮಾಡಬೇಕೆಂದು ಇದ್ದೀರಿ. ಆ ಬಿಲ್ಲನ್ನು ಪಾಸ್ ಮಾಡುವವರಿದ್ದೀರಿ. ಆ ಸಂದರ್ಭದಲ್ಲಿ ಆ ತಾಲ್ಲೂಕು ಮತ್ತು ಜಿಲ್ಲಾ ಬೋರ್ಡುಗಳಿಗೆ ಈ ಬಾವಿಗಳ ವ್ಯವಸ್ಥೆಯನ್ನು ಸಹ ವಹಿಸಿ, ಸರಿಯಾದ ಒಂದು ಹತೋಟಿ ಇಟ್ಟು, ಸುವ್ಯವಸ್ಥಿತವಾದ ರೀತಿಯಲ್ಲಿ, ಸರಿಯಾದಂಥ ಯೋಜನೆ ಹಾಕಿಕೊಂಡು ಕೆಲಸಕಾರ್ಯಗಳನ್ನು ಮಾಡತಕ್ಕ ಒಂದು ವ್ಯವಸ್ಥೆ ಮಾಡಬೇಕೆಂದು ನಾನು ಸೂಚನೆ ಕೊಡುತ್ತೇನೆ.

---

2 P.M.

General Works of Rural Development.

Sri M. LINGANNA (Nanjangud).—Mr. Speaker. Sir, the main purpose with which I wish to speak on this is, to bring to the notice of Government the failure on their part to obtain necessary grant from the Central Covernment for the Social Welfare activities. Every member of this House is aware that the welfare activity was directly sponsored and financed by the Central Government and I believe that every State has constituted a Committee on State level. To that extent, they are benefited. No such committee is constituted by this Government and as such Mysore State is not at all benefited by this activity sponsored and financed by the Central Government. Sir, I belirve that two lakhs of rupees would have been drawn by this committee if the Government had constituted a Social Welfare Board at the State level. I want to know as to why the State Government have not taken any steps so far as this activity is concerned. I also ask, whether the amount that is due to the State Government by the...........

Sri A. G. RAMACHANDRA RAO.—I rise to a point of order. The motion is regarding Rural Development and my Hon'ble friend is speaking about Social Welfare Board. I could answer all the points that he has raised; but whether it is relevant is the question.

Mr. SPEAKER.—The Hon'ble Member may confine himself to only Rural Development.

Sri M. LINGANNA.—Rural Development includes Social Welfare also.

Mr. SPEAKER.—It includes everything. You can take another opportunity. Arguments can be expanded, but now, on account of our limitation of time we shall confine ourselves to this.

Sri M. LINGANNA.—I have almost come to the end. The other aspect of the Rural Development is the roads. So far as the roads within the villages are concerned, there is no provision whatsoever similar to the provision they have made with regard to Municipalities. When the Chief Minister visited one of the villages of the, Mysore Taluk a member of the Village Panchayat discussed the point with him. The Chief Minister, if I remember correct, also agreed with me and the Panchayat member, and said the Government would find some amount and convert that amount into loans which could be utilised for village roads and their repairs within the village limit. It is a fact known to every one of us that every village needs the help of Government so far as the road aspect is concerned. I want a definite answer in this regard whether the Government is thinking of creating such a fund by which the Village Panchayats are helped by way of loans and recovered by instalments.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ—ಅನುಸೂಚಿತ ಜಾತಿಗಳು).—ಸ್ವಾಮಿ, ಈ ಗ್ರಾಮಾಭಿವೃದ್ಧಿಗಾಗಿ ಸರ್ಕಾರದವರು ಒಂದು ಗ್ರಾಂಟು ಕೊಡುತ್ತಿದ್ದಾರೆ. ಆದರೆ ಸ್ವರಾಜ್ಯ ಬಂದಮೇಲೆ ಹರಿಜನರ ಅಭ್ಯುದಯದ ವಿಚಾರದಲ್ಲಿ ಎಷ್ಟುಮಟ್ಟಿಗೆ ಶ್ರದ್ಧೆವಹಿಸಿ ಕೆಲಸಮಾಡಬೇಕೆಂಬ ಬಗ್ಗೆ ಇತ್ತೀಚೆಗೆ ಆಕ್ಟುಗಳನ್ನು ಮಾಡಿರುವುದರಲ್ಲಿ ಅನುಕೂಲವಾದ ಕಾನೂನುಗಳನ್ನು ಕಡ್ಡಾಯವಾಗಿ ಅಳವಡಿಸಿದ್ದರೂ ಕೂಡ ಕಾರ್ಯರೂಪದಲ್ಲಿ ಈ ಕೆಲಸ ಸರಿಯಾಗಿ ಆಗುತ್ತಿಲ್ಲ. ಈಗ ಅನೇಕ ಕಡೆ ತಾವು ಪರೀಕ್ಷೆಮಾಡಿ ನೋಡಿದರೆ, ಗ್ರಾಮಾಭಿವೃದ್ಧಿಗಾಗಿ ಒದಗಿಸಿರುವುದರಲ್ಲಿ ಎಷ್ಟು ಹಣ ಖರ್ಚಾಗಿದೆ, ಅದರಿಂದ ಹರಿಜನರ ಕೇರಿಗಳ ಅಭಿವೃದ್ಧಿಗಾಗಿ ಮತ್ತು ಇತರ ಕೆಲಸಗಳಿಗಾಗಿ ಎಷ್ಟು ಖರ್ಚಾಗಿದೆ ಎಂಬುದನ್ನು ಪರಿಶೀಲಿಸಿದರೆ ಶೋಚನೀಯವಾದ ಒಂದು ಚಿತ್ರ ಕಾಣುತ್ತದೆ. ಅನೇಕ ಮುನಿಸಿಪಾಲಿಟಿಯವರು ಡೆವಲಪ್‌ಮೆಂಟ್ ಸ್ಕೀಂ ಕಳುಹಿಸುವಾಗ ಗ್ರಾಂಟು ಕೇಳುತ್ತಾರೆ. ಬಹುಶಃ ಮಂತ್ರಿಗಳು ಪ್ರವಾಸ ಮಾಡುವಾಗಲೂ ಕೂಡ ಎಷ್ಟೋಸಲ 'ಹರಿಜನರ ಬೇಡಿಕೆಗಳಿಗೆ ಡೆಪ್ಯುಟಿ ಕಮಿಷನರಿಗೆ ನೇರವಾಗಿ ಅರ್ಜಿ ಹಾಕಿ; ಹರಿಜನರಾದ ನೀವು ನಿಮ್ಮ ಕುಂದುಕೊರತೆಗಳನ್ನು ಹೇಳಿಕೊಂಡರೆ ಅಲ್ಪಸ್ವಲ್ಪ ಅಮೀಲಿಯೋರೇಷನ್ ಗ್ರಾಂಟು ಕೊಡುತ್ತಾರೆ' ಎಂದು ಉತ್ತರಕೊಡುತ್ತಾರೆ. ಆದರೆ ರೂರಲ್ ಡೆವಲಪ್‌ಮೆಂಟ್ ಗ್ರಾಂಟನ್ನು ಹಳ್ಳಿಗಳಿಗೆ ಕೊಡುವಾಗ ಪಂಚಾಯಿತಿಯವರು ಮುಂದೆ ಬಂದು ಹರಿಜನರಿಗೆ ಇಂಥ ಸಹಾಯಬೇಕು ಎಂದು ಕೇಳಿರುವುದು ಬಹುಶಃ ಎಲ್ಲೂ ಕಂಡುಬಂದಿಲ್ಲ, ಯಾವುದಾದರೂ ಒಂದೆರಡು ಮುನಿಸಿಪಾಲಿಟಿಗಳವರು ಈ ಕೆಲಸ ಮಾಡಿದ್ದರೆ ಅವರನ್ನು ವಂದಿಸಬೇಕು. ಅಂತೂ ಸ್ವರಾಜ್ಯ ಬಂದಮೇಲೆ ಸರ್ಕಾರದವರು ಎಷ್ಟೇ ಹೇಳಿದರೂ ಡಿಸ್ಟ್ರಿಕ್ಟ್‌ಬೋರ್ಡು, ಕಾರ್ಪೊರೇಷನ್, ಮುನಿಸಿಪಾಲಿಟಿ ಮತ್ತು ಮುಖ್ಯವಾಗಿ ಪಂಚಾಯಿತಿಗಳವರು ಗ್ರಾಮಾಭಿವೃದ್ಧಿ ವಿಚಾರದಲ್ಲಿ ಹರಿಜನರ ಏಳಿಗೆಗಾಗಿ ಸಾಕಾದಷ್ಟು ಸಹಾಯಮಾಡಿಲ್ಲ. ಯಾರನ್ನು ಕೇಳಿದರೂ ಒಬ್ಬರು ಇನ್ನೊಬ್ಬರಮೇಲೆ ನೆಪ ಹೇಳಿ ಕಾಲ ತಳ್ಳುತ್ತಿದ್ದಾರೆ. ಹೀಗಾಗಿ ಹರಿಜನರಿಗಾಗಿ ಈ ಸಂಬಂಧವಾದ ಕಾರ್ಯಗಳು ಕಾರಣಾಂತರಗಳಿಂದ ನಡೆಯುತ್ತಿಲ್ಲ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದವರು ನಿರ್ದಿಷ್ಟವಾದ ಸರ್ಕ್ಯುಲರ್ ಕಳುಹಿಸಿ ಸ್ಟ್ಯಾಚ್ಯೂಟರಿ ಡ್ಯೂಟಿ ಎಂದು ಹೇಳುವಹಾಗೆ ಪಂಚಾಯಿತಿಯವರು ಸರಿಯಾದ ನಿಗಾಕೊಡುವಂತೆ ಆರ್ಡರು ಮಾಡಬೇಕು ಮತ್ತು ಆಗಿಂದಾಗ್ಗೆ ರಿಟರ್ನ್ಸ್ ತರಿಸಿ ಪ್ರೋಗ್ರೆಸ್ ಎಷ್ಟಾಗಿದೆಯೆಂದು ನೋಡಿ ಪಂಚಾಯಿತಿಯವರಮೇಲೆ ತನಿಖೆ ನಡೆಸಬೇಕು. ಹೀಗೆ ಮಾಡಿ ಗ್ರಾಮಾಂತರ ಪ್ರದೇಶಗಳಲ್ಲಿರುವ ಹರಿಜನರ ಉದ್ಧಾರದಕಡೆ ಪಂಚಾಯಿತಿಯವರು ಸರಿಯಾದ ನಿಗಾಕೊಡುವಂತೆ ಏರ್ಪಾಡುಮಾಡಬೇಕು ಎಂದು ಸಲಹೆಮಾಡುತ್ತೇನೆ.

Sri T. CHANNIAH (Minister for Public Health and Local Self-Government).—Mr. Speaker, Sir, Government are in general agreement with the views expressed by the Hon'ble members who just now spoke, namely, that rural development works should be executed promptly. Before answering them, I wish to point out that in regard to carrying out of the well works, road works, etc., we have at present one Sub-Overseer in each taluk. During last year and the current year, Government have sanctioned about Rs. 21,82,290 for carrying out the rural development works. Out of this amount nearly 850 works have been sanctioned and 599 well works have been carried out so far. Sir, Government is considering whether to augment the staff or to sanction an allowance to the Sub-Overseers, as their work has greatly increased. Another point that

(SRI T. CHANNIAH.)

was raised was that the well works and road works should be started well in advance. Of course, Government are very keen on seeing to expeditions completion of these works. But even after orders are communicated, these works cannot be taken up immediately because of the rainy season. This work cannot therefore be undertaken during the early part of the year. That is one of the reasons why these well works are taken up a little late. I agree with Hon'ble Member Sri Nagappa Setty and others that once the work is entrusted, it should be seen that it is completed before the end of the official year. I note the suggestion which will be duly communicated to the authorities concerned. Sir, on no previous occasion Government have sanctioned such huge amounts for well works as we have done now. Instructions have been issued to Deputy Commissioners that all incomplete wells must be completed and even new works must be completed well in time. Some members suggested that, just as in the case of the scheme sponsored by Government to sanction loans to the Town Municipalities for their water supply schemes, some such scheme should be formulated in the case of rural water supply also. Sir, we all know that such a scheme involves very huge expenditure. But, considering the urgent need for drinking water, in rural parts we have sanctioned Rs. 28 lakhs for construction of wells.

Sri M. MADIAH.—We have only one hour and the Hon'ble Minister is taking so much time.

Mr. SPEAKER.—I am noting the time.

Sri T. CHANNIAH.—Sir, I will not take much time of the House. Sir, another point was raised, namely, that when the Rural Development Committees were functioning, rural development works were being executed very expeditiously, and after their abolition the progress has been slow.

Sri Lakkappa pointed out that after the abolition of the Development committees, the progress of rural development works was very slow. I want to contradict that statement. During the past two years the amount spent was Rs. 19 lakhs and odd in 1951-52 and Rs. 15 lakhs in 1950-51. The number of drinking water wells completed during these two years was 221 and 193 respectively. On the rural communications side sixty-eight miles and four furlongs were constructed in 1950-51 and 211¼ miles during 1951-52. The number of drainage works completed in 1950-51 is 201 and in 1951-52 it is 266. Village extension lay-outs—146 and 333 in 1950-51 and 1951-52, respectively. So I must say that after the abolition of Rural Development Committees, more work has been done. In regard to providing drinking water wells, compared to 1950-51, in 1951-52 627 well works had been completed. Village extensions laid during 1951-52 was 196 whereas in 1950-51 it was only 146.

ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಸ್ವಾಮಿ, ಈಗ ತಾವು ಹೇಳುತ್ತಿರುವುದರಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಹೊಸದಾಗಿ ಎಸ್ಟಿಮೇಟ್ ಮಾಡಿರುವುದರಲ್ಲಿ ನಿಧಾನವಾಗಿದೆಯೆಂದು ತಿಳಿಯೋಣವೇ ಅಥವಾ ಹಳೆಯ ಭಾವಿಗಳ ರಿಪೇರಿ ಕೆಲಸವೇ ತಡವಾಯಿತೆಂದು ತಿಳಿಯೋಣವೇ?

Mr. SPEAKER.—They want the Minister to be very brief in his reply.

Sri T. CHANNIAH.—Yes, Sir, I will be brief. I am coming to a close.

Regarding the point raised by Sri Gopala Gowda that no amount is set apart for rural road works, I think he must be aware that after the enactment of the District Boards and Village Panchayets Act of 1952, 25 per cent of land revenue has been assigned for rural communications, well works, etc.

Loans to Harijans for purchasing bullocks.

*ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು-ಮೂಡಿಗೆರೆ—ಅನುಸೂಚಿತ ಜಾತಿಗಳು).—ಸ್ವಾಮಿ, ಹರಿಜನರ ಏಳಿಗೆಯ ವಿಚಾರದಲ್ಲಿ ರಾಜ್ಯಾಂಗದ ನಿಯಮವೇನಿದೆಯೋ ಅದನ್ನನುಸರಿಸಿ, ರಾಜ್ಯಾಂಗದ ಕ್ರಮ, ನಿರೂಪಣೆ, ಗುರಿ ಏನಿದೆಯೋ ಅದನ್ನು ಒಂದು ಮಾರ್ಗದರ್ಶಕವಾಗಿಟ್ಟುಕೊಂಡು ಹರಿಜನರ ಅಭಿವೃದ್ಧಿಯ ಬಗ್ಗೆ ಸಂಸ್ಥಾನದ ಸರ್ಕಾರದವರು ಒಂದು ಯೋಜನೆಯನ್ನು ಹಾಕಿಕೊಂಡು ಅದರಂತೆ ನಡೆಯುವುದು ಒಳ್ಳೆಯದು . . . .

Sri T. CHANNIAH.—Serial number 19 is disallowed.

Sri S. GOPALA GOWDA.—He is speaking on cut motion bearing Serial number 17.

Mr. SPEAKER.—The subject matter of your cut motion is 'purchase of bullocks.'

ಶ್ರೀ ಜಿ. ಪುಟ್ಟಸ್ವಾಮಿ.—ರಾಜ್ಯಾಂಗದ ನಿಯಮವನ್ನು ಪ್ರತಿಯೊಂದು ಸರ್ಕಾರವೂ ಪಾಲಿಸಬೇಕಾದುದು ಆದ್ಯಕರ್ತವ್ಯ. ಹಾಗೆಯೇ ಹರಿಜನರ ಆರ್ಥಿಕಸ್ಥಿತಿಯ ಬಗ್ಗೆ ಮೊದಲೇ ಹೇಳಿದಂತೆ ಒಂದು ಯೋಜನೆಹಾಕಿಕೊಂಡು ಅವರ ಅರ್ಥಿಕಸ್ಥಿತಿಯನ್ನು ನಿಖರವಾಗಿ ಉತ್ತಮ ಪಡಿಸುವುದಕ್ಕೆ ಪ್ರಯತ್ನ ಮಾಡದೇಇದ್ದರೆ, ಈ ವಿಚಾರವಲ್ಲಿ ಸರ್ಕಾರ ಇದುವರೆಗೆ ಏನು ಸಾಧಿಸಿದೆಯೋ ಅದು ಪ್ರಚಾರಕ್ಕೆ ಬರದೆ, ಮುಂದೆ ಅದರಿಂದ ಏನೂ ಪ್ರಯೋಜನವಾಗದೇ ಬಹಳ ಅನಾನುಕೂಲವಾಗುತ್ತದೆ. ಈಗಾಗಲೇ ಹರಿಜನರ ಅರ್ಥಿಕ ಸ್ಥಿತಿಯನ್ನು ಉತ್ತಮ ಗೊಳಿಸಲು ಸರ್ಕಾರದವರು ಅವರಿಗೆ ಮುಫತ್ತಾಗಿ ಐದು ಎಕರೆ ಜಮೀನು—ಮೂರು ಎಕರೆ ಖುಷ್ಕಿ, ಎರಡು ಎಕರೆ ತರೀ—ಕೊಡುತ್ತಿರುವುದು ಗೊತ್ತೇ ಇದೆ. ಅದರಂತೆ ಜಮೀನು ಆಬಾದು ಮಾಡುವುದಕ್ಕೆ ಅವರಿಗೆ ಬೇಕಾದ ಸಾಧನ ಸಾಮುಗ್ರಿಗಳನ್ನೂ ಒದಗಿಸದಿದ್ದರೆ ಇನ್ನು ಹತ್ತು ವರ್ಷಗಳಾದರೂ ಅವರು ಮುಂದುವರಿಯುವುದಕ್ಕೆ ಅವಕಾಶವಿಲ್ಲವೆಂದು ಹೇಳದೇ ವಿಧಿಯಿಲ್ಲ. ಇದು ಬಹು ಮುಖ್ಯ ಪ್ರಶ್ನೆಯೆಂದೂ, ಇದನ್ನು ತೀವ್ರವಾಗಿ ಆಲೋಚನೆಮಾಡಬೇಕೆಂದು ಬಹಳ ಕಾಲದಿಂದಲೂ ಸಹ ಶಾಸನ ಸಭೆಗಳಲ್ಲಿ ಹರಿಜನ ಸದಸ್ಯರು ಈ ಬಗ್ಗೆ ಆಗಿಂದಾಗ್ಗೆ ಮನವಿಗಳನ್ನು ಸಲ್ಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಹೀಗೆ ಮನವಿಗಳನ್ನು ಸಲ್ಲಿಸಿರುವುದು ಸಹ cut motions ಮೂಲಕ, ಬಡ್ಜೆಟ್ ಭಾಷಣಗಳ ಮೂಲಕ ಮತ್ತು ಇತರ ಸಮಯಗಳಲ್ಲಿ ಸರ್ಕಾರದ ಗಮನಕ್ಕೆ ಬಂದಿದೆ. ಆಗ ಪ್ರತಿನಿಧಿ ಸದಸ್ಯರು ಅಮೋಘ ಸಲಹೆಗಳನ್ನು ಸಹ ಕೊಟ್ಟಿರುತ್ತಾರೆ. ಅದೇ ರೀತಿ ಪಾಲಿಸಿ ಸಮಿತಿಗಳ ಮೂಲಕವೂ ಸಹ ನಿಮ್ಮ ವರ್ಗದವರ ಬೇಡಿಕೆಗಳೇನು ಎಂಬುದುರ ಸರ್ಕಾರದ ಗಮನಕ್ಕೆ ಬಂದಿದೆ ಇಷ್ಟಾದರೂ ಈ ವಿಚಾದಲ್ಲಿ ಸರ್ಕಾರದವರು ದೃಢಮನಸ್ಸಿನಿಂದ ನಿಮ್ಮ ವರ್ಗದವರ ಏಳಿಗೆಯ ವಿಚಾರದಲ್ಲಿ ಮುಂದುವರಿದಿಲ್ಲವಲ್ಲ ಎಂದು ವಿಷಾದ ಪಡಬೇಕಾಗಿದೆ. ಈಗಲಾದರೂ ಸರ್ಕಾರದವರು ಆ ಅಮೂಲ್ಯ ಸಲಹೆಗಳನ್ನು ಗಣನೆಗೆ ತೆಗೆದುಕೊಂಡು, ಸಹಾನುಭೂತಿಯಿಂದ ಪರಿಶೀಲಿಸಿ, ರಾಜ್ಯಾಂಗದ ಗುರಿ ಏನಿದೆಯೋ, ನಿಯಮವೇನಿದೆಯೊ ಅದನ್ನು ನಿಮ್ಮ ವರ್ಗದ ಅಭಿವೃದ್ಧಿ ವಿಚಾರದಲ್ಲಿ ಮುಂದುವರಿಸಿ ಅವರ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಬೇಕೆಂದು ವಿನಂತಿ.

Mr. SPEAKER.—The Hon'ble Member must be brief.

ಶ್ರೀ ಜಿ. ಪುಟ್ಟಸ್ವಾಮಿ.—ಅವರು ವ್ಯವಸಾಯಾಭಿವೃದ್ಧಿಯಲ್ಲಿ ಮುಂದುವರಿಯಲು ಜಮೀನು ಆಬಾದು ಮಾಡುವುದಕ್ಕೆ ಪ್ರತಿಯೊಬ್ಬ ಹರಿಜನನಿಗೂ ಒಂದು ಜೊತೆ ಎತ್ತು ಮತ್ತು ಜಮೀನು ಆಬಾದಿಗೆ ಬೇಕಾದ ಇತರ ಸಲಕರಣೆಗಳು—ಇವುಗಳನ್ನೊದಗಿಸಲು ಬಡ್ಜೆಟ್‌ನಲ್ಲಿ ಹಣವನ್ನೊದಗಿಸಬೇಕೆಂದು ಕೋರುತ್ತೇನೆ.

Depressed Class Amelioration Grants (how spent).

*ಶ್ರೀ ಎಂ. ಮಾದಯ್ಯ (ನಂಜನಗೂಡು–ಅನುಸೂಚಿತ ಜಾತಿಗಳು).—ಸ್ವಾಮಿ, ಈ ಸಭೆ ಸಂಸ್ಥಾನದ ಬಡ್ಜೆಟ್ಟನ್ನೂ ಮತ್ತು ಅದರ ಹಂಚಿಕೆಯನ್ನೂ ಅಂಗೀಕರಿಸಿದನಂತರ ಸರ್ಕಾರದವರು ಆ ಹಣದ ವಿನಿಯೋಗದ ಕಡೆಗೆ ಸರಿಯಾದ ನಿಗಾ ಕೊಡಬೇಕಾದುದು ಅತ್ಯಗತ್ಯವೆಂದು ಭಾವಿಸುತ್ತೇನೆ. ಪ್ರತಿ ವರ್ಷವೂ ಸಂಸ್ಥಾನದ ನಾನಾ ಬಾಬಿಗೆ ಬಡ್ಜೆಟ್ ಮಂಜೂರಾಗುತ್ತಲೇ ಇದೆ. ಆದರೆ ಅದು ಸರಿಯಾಗಿ ವಿನಿಯೋಗವಾಗ ತ್ತಿಲ್ಲ. ಒಂದು ವ್ಯವಸ್ಥಿತ ರೀತಿಯಲ್ಲಿ ಆ ಹಣವನ್ನು ಸರ್ಕಾರ ಖರ್ಚು ಮಾಡುತ್ತಿಲ್ಲ.

ಸರ್ಕಾರದವರು Depressed Class Amelioration ಗಾಗಿ ಸುಮಾರು ಎಂಟು ಲಕ್ಷ ಚಿಲ್ಲರೆ ರೂಪಾಯಿಗಳಷ್ಟು ಒದಗಿಸಿಕೊಂಡಿದ್ದಾರೆ. ಈ ಬಾಬಿಗಾಗಿ ಇಂಡಿಯಾ ಸರ್ಕಾರದವರು ಸಹ ಹಣವನ್ನೊದಗಿಸುತ್ತಾರೆ. ಆದರೆ ಒದಗಿಸಿದ ಹಣ ಸರಿಯಾಗಿ ಖರ್ಚಾಗುತ್ತಿಲ್ಲ. ಬಹು ಭಾಗದ ಹಣ lapse ಆಗಿದೆ. ಪ್ರಾರಂಭದಲ್ಲಿ ಉತ್ಸಾಹದ ಮೇಲೆ ಹಣವನ್ನೇನೋ ಬಡ್ಜೆಟ್‌ನಲ್ಲಿ ಒದಗಿಸುವುದು ವಾಡಿಕೆಯಾಗಿಹೋಗಿಬಿಟ್ಟಿದೆ. ಆದರೆ ಖರ್ಚು ಮಾತ್ರ ಸರಿಯಾಗಿ ಆಗುತ್ತಿಲ್ಲ. ಉದಾಹರಣೆಗೆ, ಡಿಪ್ರೆಸ್ಡ್ ಕ್ಲಾಸ್ ಹಾಸ್ಟೆಲ್‌ಗಳಿಗಾಗಿ ಸುಮಾರು ಐದು ಲಕ್ಷ ಚಿಲ್ಲರೆ ಹಣ ಮಂಜೂರಾಗಿದೆ. ಹಾಸ್ಟೆಲಿಗಾಗಿ ಹಣ ಒದಗಿಸಿದ್ದರೂ ಅದು ಸರಿಯಾಗಿ ವಿನಿಯೋಗವಾಗುತ್ತಿಲ್ಲ. ಉದಾಹರಣೆಗೆ, ತುಮಕೂರು, ಮೈಸೂರು ಮತ್ತು ನಂಜನಗೂಡು—ಈ ಪ್ರದೇಶಗಳಲ್ಲಿ ಹಾಸ್ಟೆಲಿಗಾಗಿ ಹಣ ಮಂಜೂರಾಗಿ estimate ಸಹ ಆಗಿದೆ. ಆದರೂ ಕೂಡ, ಈ ಕೆಲಸವನ್ನು ಕೂಡಲೇ ಕೈಗೊಳ್ಳಲು ಏನು ಅನಾನುಕೂಲವೋ ಗೊತ್ತಿಲ್ಲ. ಅಂತೂ ಆ ಕೆಲಸವನ್ನು ಇನ್ನೂ ಕೈಗೊಂಡಿಲ್ಲ. ಸರ್ಕಾರ, ಅಂದರೆ ಅಧಿಕಾರಿವರ್ಗ, ಈ ವಿಚಾರದಲ್ಲಿ ಏನು ತೊಂದರೆ ಎಂಬುದನ್ನೂ ತಿಳಿಸಿಲ್ಲ. ಈ ಬಗ್ಗೆ ಮಾರ್ಚಿ ಕೊನೆಯಲ್ಲಿ ಒಂದು ಗೌರ್ನಮೆಂಟ್ ಆರ್ಡರ್ ಹೊರಡಿಸಿರುತ್ತಾರೆ. ಕೋಲಾರದಲ್ಲಿ ಸಹ ಒಂದು ಹಾಸ್ಟೆಲ್ ಪ್ರಾರಂಭಿಸುವ ಬಗ್ಗೆ ಮೊದಲು 60 ಸಾವಿರಕ್ಕೆ ಒಂದು ಎಸ್ಟಿಮೇಟ್ ತಯಾರಾಗಿ, ಅದು 80 ಸಾವಿರದವರೆಗೆ ಏರಿ ಕೊನೆಗೆ 2 ಲಕ್ಷ 36 ಸಾವಿರ ರೂಪಾಯಿಗಳಿಗೆ ಬಂದಿದೆ. ಆದರೂ ಎಸ್ಟಿಮೇಟ್ ಮಂಜೂರಾಗಿಲ್ಲ. ಈ ಬಾಬಿಗಾಗಿ ಒಂದಿಷ್ಟು ಹಣವನ್ನೇನೋ, ಒಂದು ಲಕ್ಷ 20 ಸಾವಿರದವರೆಗೆ ಖರ್ಚು ಮಾಡಿರುತ್ತಾರೆ. ಹೀಗಾಗಿ ಹಣ lapse ಆಗುವ ಪರಿಸ್ಥಿತಿಯೇ ಹೆಚ್ಚಾಗಿದೆ. ಈ ಮಧ್ಯೆ ಇನ್ನೊಂದು ಗೌರ್ನಮೆಂಟ್ ಆರ್ಡರ್ ಆಗಿ ತುಮಕೂರು, ನಂಜನಗೂಡಿಗೆ ಕೊಟ್ಟಿರತಕ್ಕ ಹಣದಿಂದ 33 ಸಾವಿರ ರೂಪಾಯಿ ತೆಗೆದು ಕೋಲಾರದ ಹಾಸ್ಟಲಿಗೆ ಕೊಟ್ಟಿರುತ್ತಾರೆ. ಇದನ್ನು ನೋಡಿದರೆ ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಹಚ್ಚುವಂತೆ ಆಗುತ್ತದೆ.

Money is already spent without estimates being sanctioned by Government. With regard to other hostels, though administrative and technical sanctions have been accorded by Government, neither the officers nor the Government have taken any further action. Will you admit such a situation? This work is declared to be important work. Can you tolerate such things? I do not know how things are going on. Public money is being spent without proper estimates.

(ಶ್ರೀ ಎಂ ಮಾದಯ್ಯ.)

2-30 P.M.

That is not the way and it is so in case of many other items. This is not the way in which moneys should be allowed to be expended.

ಆದ್ದರಿಂದ ಸರ್ಕಾರದವರು ಈ ಅವ್ಯವಸ್ಥೆಯಿಂದ ಕೂಡಿದ ಮಾರ್ಗವನ್ನು ಅನುಸರಿಸುವುದಕ್ಕೆ ಅವಕಾಶ ಕೊಡಬಾರದು. ಜಂಟಿ ಜವಾಬ್ದಾರಿ ಇರುವುದರಿಂದ ಯಾರಿಗೇ ಆಗಲಿ ಒಂದು ಹೆಚ್ಚಿನ ಮುತುವರ್ಜಿಯನ್ನು ವಹಿಸದೇ ನ್ಯಾಯವಾದ ರೀತಿಯಲ್ಲಿ ಹೋಗಬೇಕು. ಇವೊತ್ತಿನ ದಿವಸ ಒಬ್ಬ ಅಧಿಕಾರಿ, ಚೀಫ್ ಇಂಜಿನಿಯರು ತಮ್ಮ ಹೆಸರಿನಲ್ಲೇ ಇರ್‌ವಿಟೇಷನ್ ಪ್ರಿಂಟ್ ಮಾಡಿಸಿ, ಚೀಫ್ ಮಿನಿಸ್ಟರವರನ್ನು ಕರೆಸಿ ಒಂದು ಲಕ್ಷ 20 ಸಾವಿರ ರೂಪಾಯಿಗಳ ಕೆಲಸ ಮಾಡಿಸಿದ್ದಾರೆ. ಆ ಎಸ್ಟಿಮೇಟು ಮಂಜೂರಾಗಿಲ್ಲವೇ ? ಕೇಳಿ.

Mr. SPEAKER.—You are taking more time. Please close your remarks. You are emphasising it more than is needed.

ಶ್ರೀ ಎಂ. ಮಾದಯ್ಯ.—ದಯವಿಟ್ಟು ಪಕ್ಷಪಾತ ಮನೋಭಾವ ಬಿಡಿ. ಅಲ್ಲಿಗೆ ಹಾಸ್ಟೆಲ್ ಅಗತ್ಯವಾಗಿರಬಹುದು. ಸ್ಪೀಡೀ ವರ್ಕ್ ಆಗಿರಬಹುದು. ಅದು ಅಲ್ಲ, ಎಲ್ಲರನ್ನೂ ಒಂದೇ ಸಮನಾಗಿ ಪರಿಗಣಿಸದೆ ಇರುವುದು ಧರ್ಮವಲ್ಲ, ನ್ಯಾಯವಲ್ಲ. ಆ ರೀತಿ ಮಾಡಿದರೆ ಅಧಿಕಾರದಲ್ಲಿರುವವರು ತಮಗೆ ಇರುವ ಅಧಿಕಾರವನ್ನು mis-use ಮಾಡಿಕೊಂಡ ಹಾಗಾಗುತ್ತದೆಯೇ ಹೊರತು ಮತ್ತೆ ಬೇರೆ ಅಲ್ಲ.

With these observations, I place this cut motion before the Hon'ble House.

*ಶ್ರೀ ಬಿ. ರಾಚಯ್ಯ (ಯಳಂದೂರು–ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ಮಾನ್ಯ ಶ್ರೀಮಾನ್ ಮಾದಯ್ಯನವರು ತಂದಿರತಕ್ಕ ಈ ಖೋತಾ ನಿರ್ಣಯದ ಮೇಲೆ ಮಾತನಾಡುತ್ತಾ ನಿಮ್ನ ತರಗತಿಯವರಿಗೆ ಹಾಸ್ಟಲುಗಳಿಗಾಗಿ ಸರ್ಕಾರದವರು 1954-55ನೇ ಸಾಲಿನ ಬಡ್ಜೆಟ್‌ನಲ್ಲಿ ಒದಗಿಸಿರತಕ್ಕ ಹಣ ಸೆಂಟ್ರಲ್ ಪಾಲಿಸಿ ಕಮಿಟಿಯಲ್ಲಿರತಕ್ಕ ಸದಸ್ಯರುಗಳ ಒಂದು ಸಲಹೆ ಮೇರೆಗೆ, ಅದರ ಪ್ರಕಾರ 5 ಲಕ್ಷ ರೂಪಾಯಿಗಳನ್ನು ಹಾಸ್ಟೆಲುಗಳ ಕಟ್ಟಡಕ್ಕೆ ಮಂಜೂರು ಮಾಡಲಾಗಿತ್ತು, ಮುಖ್ಯವಾಗಿ ಇದರಲ್ಲಿ ಕೆಲವು ಹಾಸ್ಟೆಲುಗಳಿಗೆ ಪಕ್ಷಪಾತ ತೋರಿಸಿದ್ದಾರೆ ಎಂದು ಹೇಳಿ ಈಗಾಗಲೇ ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಮೈಸೂರು ಹಾಸ್ಟೆಲಿನ ವಿಷಯ ತಿಳಿಸಬೇಕಾಗಿದೆ. ಈ ಮೈಸೂರಿನ ಹಾಸ್ಟೆಲಿಗೆ ಒಂದು ಸೈಟನ್ನು ಸರ್ಕಾರದವರು ಎಂದರೆ ಸಂಬಂಧಪಟ್ಟ ಮಂತ್ರಿಗಳು ಮಂಜೂರು ಮಾಡಿದ್ದಾಗ್ಯೂ ಕೂಡ ಅಲ್ಲಿನ ಟ್ರಸ್ಟ್ ಬೋರ್ಡಿನವರು ಅದರಲ್ಲಿ ಸ್ವಲ್ಪ ಭಾಗ ಮಾತ್ರ ತೆಗೆದುಕೊಳ್ಳಿ ಎಂದು ಹೇಳಿ—ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಆಗಿ 8 ತಿಂಗಳಾದರೂ ಕೂಡ-ಆ ವಿಷಯದಲ್ಲಿ ಇನ್ನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಸರ್ಕಾರ ಏನು ಒಂದು ಉದಾಸೀನ ಮನೋಭಾವ ತೋರಿಸಿದೆ ಎಂಬುದಕ್ಕೆ ಇದೂ ಒಂದು ಉದಾಹರಣೆ ಎಂದು ಹೇಳಬೇಕಾಗಿದೆ. ಎರಡನೆಯದಾಗಿ ಚಾಮರಾಜನಗರ ತಾಲ್ಲೂಕು, ಗುಂಡ್ಲುಪೇಟೆ, ಹೆಗ್ಗಡದೇವನಕೋಟೆ ತಾಲ್ಲೂಕು ಇಲ್ಲೆಲ್ಲಾ ಕಾಲೊನಿ ಏರ್ಪಾಡು ಮಾಡುವಾಗ ಸರ್ಕಾರದವರು ಎಷ್ಟು ದುಡ್ಡು ಮಂಜೂರು ಮಾಡಿದ್ದರೋ ಅದಕ್ಕಿಂತಲೂ ಹೆಚ್ಚಾಗಿ ಖರ್ಚು ಮಾಡಿ, ಎಂದರೆ—, ಒಂದು ಮನೆಗೆ 2,000 ರೂಪಾಯಿ ಖರ್ಚು ಮಾಡಬೇಕಾಗಿತ್ತು, ಆದರೆ 2,800 ರೂಪಾಯಿ ಖರ್ಚು ಮಾಡಿ—ಅಲ್ಲಿ ವಾಸಕ್ಕೆ ಬರತಕ್ಕ ಜನರಿಂದ ಹೆಚ್ಚಿಗೆ ಖರ್ಚಾದ ಆ 800 ರೂಪಾಯಿಗಳನ್ನು ವಸೂಲು ಮಾಡಿಕೊಳ್ಳಬೇಕೆಂದು ಆರ್ಡರ್ ಮಾಡಿದ್ದಾರೆ. ಹಿಲ್‌ಟ್ರೈಬ್ಸ್ ಜನರು ಬಂದು ಅಲ್ಲಿ ವಾಸಕ್ಕೆ ಇರಬೇಕಾಗಿದೆ. ಈ ರೀತಿ 800 ರೂಪಾಯಿ ಮತ್ತೆ ವಸೂಲು ಮಾಡಬೇಕೆಂಬ ಕಂಡೀಷನ್ ಹಾಕಿರುವುದರಿಂದ ಅಲ್ಲಿ ಕಟ್ಟಿರತಕ್ಕ ಮನೆಗಳನ್ನು ಯಾವ ಉದ್ದೇಶಕ್ಕೆ ಕಟ್ಟಿದರೋ ಅದು ಸಫಲವಾಗುತ್ತಾ, ಇಲ್ಲ. ಮತ್ತು ಮೈಸೂರು, ಬೆಂಗಳೂರು, ಕೋಲಾರ, ತುಮಕೂರು ಆ ಕಡೆಗಳಲ್ಲಿ ಹಾಸ್ಟಲುಗಳಿಗಾಗಿ ಎಷ್ಟು ಉತ್ಸಾಹವನ್ನು ತೋರುತ್ತೀರೋ ಅಷ್ಟೇ ಉತ್ಸಾಹವನ್ನು ಇದಕ್ಕೂ ತೋರಿಸಬೇಕೆಂದು ಹೇಳುತ್ತೇನೆ.

*Sri R. ANANTARAMAN (Chamarajpet).—I just want to support the cause of Harijans living in the City, Sir; their condition is woeful.

Mr. SPEAKER.—This is only rural development grant. Under this grant you cannot speak about Harijans living in the City.

Sri R. ANANTARAMAN.—I only wish to state that all the money spent over Harijans is spent in the rural parts and Harijans living in the cities are neglected. Their condition is rather very pitiable and Government has not bestowed any attention to this aspect.

Mr. SPEAKER.—You can take another opportunity to ventilate your grievance. The Hon'ble Minister will now reply.

*Sri P. R. RAMAIYA (Basavangudi).—Sir, Scheduled tribes are all centred in Mysore District and Government has not been paying adequate attention to their improvement. There are no hostels, no houses for them to live and they have no educational facilities. Therefore I request Government to pay special attention to these tribes. After all, they are a small population of about 15,000.

Sri T. CHANNIAH (Minister for Public Health and Local Self-Government).—Mr. Speaker, Sir, the Hon'ble Member Sri G. Puttaswamy wanted that the Government should enunciate their policy in regard *to amelioration* of the Depressed Classes. In parti-

cular he wanted that each Harijan raiyat, especially in the Malnad districts of Shimoga, Chikmagalur and Hassan, should be provided with a pair of bullocks for cultivation of his land. On the recommendation of the Members of the Policy Committee for the Depressed Classes, Sir, a sum of Rs. 4,00,000 was earmarked for granting loans for purchase of bullocks and sheep, for starting cottage industries and for grant of scholarships. These concessions were discontinued this year as it was considered that the money set apart for these purposes may better be utilised for construction of hostels. Therefore this year, on the advice of the Policy Committee Members, Government have reserved this amount for the construction of hostels. This has been decided after careful consideration. I am not sure whether it would be possible to provide a pair of bullocks to each and every Harijan raiyat living in the Malnad. It will involve considerable amount and it may not be possible to say whether the suggestion to provide bullocks to Harijan families is feasible or not.

Sri Madiah, I must say, has raised a specific issue that the budget allotment is not properly spent. I must say at the outset that on the recommendation of the Policy Committee, major allotments are made and those allotments are spent for specific purposes. I think as much as 19 lakhs of rupees have been spent for Harijan housing and for acquisition of lands for providing building sites for them. The rest of the allotment has been spent for construction of hostels and for providing other facilities. A portion of this amount has also been spent in connection with the ameliorative measure of the Scheduled Tribes. The Central Government also have given financial aid in all these matters. Government are convinced that the allotted moneys are being spent for which they are intended and not otherwise.

Regarding another point raised by my Hon'ble friend, I should say, it is an allegation which I must refute at the outset.

Sri M. MADIAH.—Sir, I take a challenge; if what I have said is not correct, I withdraw.

Mr. SPEAKER.—You can take another opportunity to make a challenge.

Sri J. MOHAMED IMAM.—On a point of information Sir. Are challenges allowed in this House?

Mr. SPEAKER.—No.

Sri T. CHANNIAH.—It is true, Sir, that the Government have set apart a sum of Rs. 5,34,000 for the construction of hostels during this year and my friend has referred to the construction of depressed class hostel at Kolar. It is not actually so. In this regard I must mention that in places like Tumkur, Mysore, Nanjangud perhaps there has been some delay due to the sites for the construction of the hostels not being settled.

Sri M. MADIAH.—Absolutely incorrect, Sir.

Sri T. CHANNIAH.—I am quite sure that the selection of the site in Tumkur has not yet been finalised. There is therefore the delay. Unless the question of site is settled, we cannot proceed further.

Mr. SPEAKER.—Do you hold the Hon'ble Member responsible for the dealy in the selection of the site?

Sri T. CHANNIAH.—No, Sir, there is no responsibility on him. Because in the locality . . . .

Mr. SPEAKER.—You mean, he ought to have helped?

Sri T. CHANNIAH.—I fully agree with the Hon'ble Speaker. Sir, My Hon'ble friend Sri Madiah thinks that it is so easy to get sites for the construction of depressed class hostels. In certain places there will be some difficulty or other in the selection of sites. Due to this, there has been some delay.

ಶ್ರೀ ಬಿ. ರಾಚಯ್ಯ.—ಈ ಬೋರ್ಡಿನಲ್ಲಿ ಹರಿಜನ ಸದಸ್ಯರು ಇಲ್ಲದೇ ಇರುವುದರಿಂದ ಅಲ್ಲವೇ ಸ್ವಾಮಿ ಇಷ್ಟು ಗಲಾಟೆಗೆಲ್ಲಾ ಅವಕಾಶವಾಗುತ್ತಾ, ಇರುವುದು?

Mr. SPEAKER.—He is only giving reasons for the delay. This is not the time to request that Harijans should be included in the Trust Board.

Sri T. CHANNIAH.—Sir, the delay in construction of hostels, particularly

(SRI T. CHANNIAH.)

in Tumkur and Mysore, was mainly due to no-selection of sites.

That was the reason why the hostels could not be started early. The Public Works Department take prompt action in executing the work of constructing the hostel in Kolar. Nobody was in the way of the Hon'ble member to get a sanction for site for a hostel in Mysore and Nanjangud. Government sanctioned the amount. The local members could have taken special interest. Sir, Government always looks forward to see that the execution of the work of all the hostels are carried out very promptly.

Reasons for non-Receipt of entire Grant due from Government of India for 1953-54.

Sri S. SRINIVASA IYENGAR (T.-Narasipur).—Mr. Speaker, from the Explanatory Note it is seen that a sum of Rs. 6,54,688 was due from Government of India as grant for 1953-54; and, Government have received only Rs. 3,45,300. I want to know why the Government did not receive the balance of the grant before the close of the year. Further, I wish to know whether the grants of the Government of India of a particular year do not lapse at the end of the year or do they continue in the coming year.

The other point is, from the Explanatory Note it is seen that the schemes will have to be approved by the Government of India. When the Government of Mysore knew definitely well that they were submitting schemes to the tune of nearly Rs. 19 lakhs and had not received those schemes approved in time for inclusion in the Budget, how did they arrive at the figure of Rs. 6,50,000 to include in the Budget? The point is, they had prepared a scheme to cost 20·5 lakhs and that scheme had been submitted to the Government of India for approval. The approval had not been received in time so as to enable the Government to provide the entire amount for the schemes in the Budget. Then, how did they pitch upon that figure 6·5 lakhs in the Budget of 1954-55? That is the point that needs a little clarification. Suppose, the Government of India did not give the lapsed grant for 1953-54, does it come to the point that we have to meet the Bill? This needs a little clarification.

Further, Sir, the rural development works for which money is sought, they are not undertaken in all the districts in a definite system. There are some taluks where there are absolutely no rural development works. Therefore, I want to know the nature of the scheme for which they are seeking our sanction.

Sri T. CHANNIAH.—Mr. Speaker, Sir, regarding the points raised by Mr. Srinivasa Iyengar whether the grant allotted by Government of India would lapse at the end of the year, it was only during the last year that such a thing happened; during the current year, I do not think, it will lapse. When these schemes were sent to Government of India, for arranging for the finances in this behalf, they took some time. Therefore, on account of the shortage of time, the Commissioner for the Depressed Classes and the Deputy Commissioners were unable to use the grant.

Sri S. SRINIVASA IYENGAR.—On a point of order. I am raising the issue on the first item—rural development works. I am not touching the second item. The Hon'ble Minister is answering the second item.

Sri T. CHANNIAH.—About the point raised by the Member, I will let him know after knowing the details.

DEMAND NO. 26—INDUSTRIES AND SUPPLIES.

43—Industries and Supplies (excluding sericulture)

Need for a Mobile Van.

Sri S. SRINIVASA IYENGAR (T.-Narasipur).—Mr. Speaker, under Demand No. 26 from the Supplementary Estimates, it is seen that the Government require Rs. 27,000 for the purchase of Mobile Van and Rs. 45,000 for establishing show-rooms in Mercara

Hubli and Mangalore and Rs. 45,000 for the expansion of Research and Designing Centre. Sir, the Government had purchased a number of vans in connection with the rural development work at the time of the working of the Committees. They have abolished these committees and those vehicles have been released. Government could have as well used one of these vehicles. I want to know the purpose for purchasing a new Van.

Policy in establishing show rooms.

Secondly, I congratulate the idea of Government for establishing show rooms. But, I would like to know the policy that they would adopt in establishing such centres. Show rooms have to be opened in every State in India. We have seen such show rooms opened by Kashmir Government everywhere. I certainly congratulate that Government. But, I want to know whether they would do it on commercial basis, whether they would sell all the goods produced by the industries run by Government and whether they would have a latitude of a commercial concern in selling these goods. With a view to ascertain the scheme that the Government have in their view, I have moved this cut motion.

Working of the designing section.

Further, Sir, about the designing section, I learn, there is already a desining section for the handloom industry. I am afraid, that office is not doing much work ; anyway, I am not fully informed about that. I would like to know what progress is made, and what research is made in designing so as to manufacturing articles suitable to the present market. Have the industries managed by Government adjusted themselves to such changes as are accomplisted by the neighbouring provinces to Mysore State. If all that is done is efficient, I am one of those to support the expenditure; otherwise, I would like to point out that something is wrong and it may be worked properly. I wanted to know the working of the designing section.

Sri H. SIDDAVEERPPA (Minister for Home and Industries).—Regarding the Van, Government proposed to purchase a mobile van for the simple reason that no van is available for that purpose. All the vans referred to by the Hon'ble Member have been fully utilised and no van is lying idle.

Regarding the show rooms a relevant point has been raised. Government want to utilise the show room not only for the purpose of selling all our goods but also for the purpose of exhibition so that anybody who wants to purchase those goods may place order and purchase through our departments. Government desire to have as many show rooms as possible. In some places, instead of having a show room, they propose to exhibit our goods in show rooms started by Central Government or other State Governments. For instance, in Bombay there is a show room for All India-Khadi and Cottage Industries.

Regarding the design section, I am sure that the Hon'ble Member has paid a visit to the Exhibition in Mysore. The designs that are now made are quite satisfactory. I am quite satisfied that the section is doing good work. The trouble with this design section is, as soon as any design is made, we cannot have a Trade Mark for it. The moment we have a particular design and think of pushing it in the market, there will be already the same designs in the market and at lower cost. I do not know how to solve this problem. I have been consulting my technicians and I am rtying to solve that problem ; we have not yet come to any conclusion. Apart from that, the designing section has been doing good work and I am thinking of strengthening that section because it is much better that we design quickly. I hope I have satisfied my friend.

Mr. SPEAKER.—Now, we shall rise for lunch and meet at 3-30.

The House adjourned for Lunch at Three of the Clock and reassembled at 3-30 P.M.

[MR. SPEAKER in the Chair]

DEMAND NO. 27.—SERICULTURE.

43. Industries and Supplies—Sericulture.

Supply of Refrigerators to Aided Graineurs.

SRI S. SRINIVASA IYENGAR (T-Narsipur).—In items 3 and 4 of the Demand, Government have stated that they require a sum of Rs. 80,000 for the purpose of meeting expenditure in connection with the scheme of supplying refrigerators to aided graineurs. I know that this comes under the Seed Control Act. But I want to know the details about the scheme; how do they propose to supply these refrigerators, and do they give them to aided graineurs free of cost or on loan. Does the scheme contemplate the supply of such refrigerators to unaided graineurs? I am deliberately putting these questions because out of the graineurs working now in the State, a very small percentage are aided graineurs and therefore the problem of unaided graineurs needs study. Disease free layings have to be supplied by them too. Therefore will the Government also consider the question of supplying refrigerators to those graineurs other than aided? Under the Seed Control Act, there is no classification like aided graineurs or unaided graineurs. So, since that difference of aided graineurs and unaided graineurs has vanished immediately after the passing of the Seed Control Act, I want to know whether it is the policy of the Government to supply the refrigerators to all the graineurs and if so, what is the total number that is required and how do they propose to meet the expenditure. If they supply, what is the condition on which they supply? Is it on loan basis or is it an outright grant? These things have to be known by this House before they assent to the proposed expenditure and I request the Government to enlighten me on these issues.

SRI H. SIDDAVEERAPPA (Minister for Home and Industries).—At the moment the scheme is only to supply refrigerators to aided graineurs. I have not thought of giving them to unaided graineurs. I understand that in the new scheme they have got only licence. But at the moment we have got about 120 registered aided graineurs in the State, out of which 30 are already supplied with refrigerators. The idea is to supply them to the other 90 graineurs also. And as a first step I propose giving 50 new refrigerators so that the total strength may be 80. Hitherto, we were paying Rs. 400 to each aided graineur by way of subvention. Now the proposal is to supply refrigerators themselves at a cost of Rs. 2,000 each.

All this money has been financed by the Central Government. Fifty per cent of this will be given as outright subsidy to aided graineurs and the other 50 per cent is given as loan to be recovered from them in five equal annual instalments.

This is the scheme at the moment that has been sponsored by the Government of India Central Silk Board.

Grainage at Thyamagondlu.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಸ್ವಾಮಿ, ಮೈಸೂರ ದೇಶದ ರೇಷ್ಮೆ ಪ್ರಪಂಚದಲ್ಲಿಯೇ ಹೆಸರುವಾಸಿಯಾಗಿದೆ. ಮೈಸೂರು ರೇಷ್ಮೆ ಬಹಳ ಪೂರ್ವಕಾಲದಿಂದಲೂ ತ್ಯಾಮಗೊಂಡ್ಲು, ದೊಡ್ಡಬಳ್ಳಾಪುರ ಮತ್ತು ತುಮಕೂರು ಜಿಲ್ಲೆಯ ಗೂಳೂರಿನಲ್ಲಿ ಪ್ರಸಿದ್ಧಿಯಾಗಿ ಬೆಳೆಯುತ್ತಿದೆ. ಈ ಪ್ರದೇಶದ ರೇಷ್ಮೆ ಹೊಳೆಯುವ ಹೊಂಬಣ್ಣದ ರೇಷ್ಮೆ. ಬಹಳ ಕಾಲದಿಂದಲೂ ತ್ಯಾಮಗೊಂಡಲಿನ ಬೀಜಗಳನ್ನೂ, ದೊಡ್ಡಬಳ್ಳಾಪುರದ ಬೀಜಗಳನ್ನೂ ಮತ್ತು ಗೂಳೂರಿನ ಬೀಜಗಳನ್ನೂ ಮೈಸೂರು ದೇಶದ ಇತರ ಭಾಗಗಳಿಗೆ ಕೊಂಡುಕೊಳ್ಳುತ್ತಿದ್ದಾರೆ. ತ್ಯಾಮಗೊಂಡ್ಲು ಫಲವತ್ತಾದ ಭೂಮಿಯನ್ನೊಳಗೊಂಡು ಸೊಗಸಾದ ಹಿಪ್ಪನೇರಳೆ ವ್ಯವಸಾಯಕ್ಕೆ ತುಂಬ ಅನುಕೂಲವಾಗಿದೆ. ಅಲ್ಲಿನ ವಾಯುಗುಣ ರೇಷ್ಮೆ ಬೆಳೆಗೆ ಒಪ್ಪತಕ್ಕದ್ದಾಗಿದೆಯೆಂಬುದು ಆ ಗಿಡಗಳು ಸೊಂಪಾಗಿ ಬೆಳೆದಿರುವುದರಿಂದಲೇ ಗೊತ್ತಾಗುತ್ತದೆ. ಈ ಕಾರಣದಿಂದ ಅಲ್ಲಿ ಸರ್ಕಾರದವರು ಒಂದು ಬಿತ್ತನೆ ಕೋಠಿಯನ್ನು ಪ್ರಾರಂಭಿಸುವುದರಿಂದ ಈಗ ಅಲ್ಲಿ ಯಾವ ರೀತಿ ಒರಟು ರೀತಿಯಲ್ಲಿ ರೇಷ್ಮೆ ತಯಾರಾಗುತ್ತಿದೆಯೋ ಅದುತಪ್ಪಿ, ಶಾಸ್ತ್ರೀಯವಾಗಿ ಇದನ್ನು ತಯಾರು ಮಾಡಲು ಅನುಕೂಲವನ್ನು ಕಲ್ಪಿಸಿ, ಈ ಗೃಹಕೈಗಾರಿಕೆಗೆ ಪ್ರೋತ್ಸಾಹಕೊಡುತ್ತಾರೆಂದು ನಂಬುತ್ತೇನೆ. ಇಂಡಿಯಾ ಸರ್ಕಾರದವರು ಸಹ ಈ ರೇಷ್ಮೆ ವ್ಯವಸಾಯದ ಬೆಳೆವಣಿಗೆಗೆ ಬಹಳ ಉತ್ತೇಜನಕೊಡುತ್ತಿದ್ದಾರೆ.

ಮೈಸೂರು ಸಂಸ್ಥಾನವಲ್ಲಿಯೂ ಸಹ ಅನೇಕ ಕಡೆ ಇದರ ಉತ್ತೇಜನಕ್ಕಾಗಿ ಬಿತ್ತನೆ ಕೋಠಿಗಳನ್ನು ಪ್ರಾರಂಭಿಸಿರುತ್ತಾರೆ. ಇನ್ನೂ ಎಷ್ಟೋ ಕಡೆಗಳಲ್ಲಿ ಈ ಗ್ರೈನೇಜ್ ಸ್ಥಾಪನೆ ಆಗಬೇಕಾಗಿದೆ. ಇದರ ಸ್ಥಾಪನೆಯಿಂದ ಶುದ್ಧವಾದ ರೇಷ್ಮೆ ತಯಾರಿಕೆಗೆ ಮಹತ್ವವಾದ ಸೌಕರ್ಯವಿದೆ. ಆದುದರಿಂದ ತ್ಯಾಮಗೊಂಡ್ಲುವಿನಲ್ಲಿ ಒಂದು ಗ್ರೈನೇಜ್ ಸ್ಥಾಪಿಸಲು ಸರ್ಕಾರದವರು ಪ್ರೋತ್ಸಾಹ ಕೊಡಬೇಕೆಂದು ಸೂಚಿಸಿ ಈ ಸಲಹೆಯನ್ನು ಸರ್ಕಾರದ ಮುಂದಿಡುತ್ತೇನೆ.

Sri H. SIDDAVEERAPPA.—Sir, it is admitted that Thyamagondlu area is also one of the most important areas for Mysore seed campaign purposes. It is in this area the Mysore seed cocoons are reared. Equally in Dodballapur also the Mysore seed cocoons are reared. At present the Dodballopur area is supplying all the needs of Thyamagondlu area. 45 lakhs of disease-free layings per annum are produced in Dodballapur area. The production in Thyamagondlu is only 30 lakhs and the need of this area is only 24 thousand disease-free layings. Hence since Dodballapur has been able to meet the demands of Thyamagondlu it is found not possible to start one grainage at Thyamagondlu urgently. Government will certainly consider when the question arises and will examine it when the matter comes up for consideration.

Need for starting experimental Sericultural Farms in Malnad.

*ಶ್ರೀ ಕೆ. ಲಕ್ಕಪ್ಪ (ಚನ್ನರಾಯಪಟ್ಟಣ).—ಅಧ್ಯಕ್ಷರೆ, ಮಲೆನಾಡು ಪ್ರಾಂತ್ಯದಲ್ಲಿ ಮುಖ್ಯವಾಗಿ ಕಾಫಿ ತೋಟಗಳು, ಏಲಕ್ಕಿ ತೋಟಗಳು, ಬತ್ತ ಬೆಳೆಯತಕ್ಕ ಗದ್ದೆಗಳು ಮತ್ತು ಅಡಿಕೆ ವ್ಯವಸಾಯ—ಇವುಗಳನ್ನು ಬಿಟ್ಟರೆ ಮತ್ತಾವ ವ್ಯವಸಾಯವೂ ಆ ಪ್ರಾಂತ್ಯದಲ್ಲಿ ಇಲ್ಲವಾಗಿದೆ. ಈ ವ್ಯವಸಾಯ ಸಹ ಕೇವಲ ಕೆಲವು ಭಾಗಗಳಲ್ಲಿದ್ದು ಇನ್ನುಳಿದ ಭಾಗ ಯಾವ ಉಪಯೋಗವನ್ನೂ ಪಡೆಯದೇ ಹಾಗೆಯೇ ಉಳಿದಿದೆ. ಒಮ್ಮೆ ನಾನು ಮಲೆನಾಡು ಪ್ರಾಂತ್ಯದಲ್ಲಿ ಪ್ರವಾಸಮಾಡಿದಾಗ ಸಕಲೇಶಪುರ ತಾಲ್ಲೂಕು ಬಾಳೇಗುಪ್ಪ ಗ್ರಾಮದಲ್ಲಿ ರೇಷ್ಮೆ ಬಿತ್ತನೆಯನ್ನು ಒಂದು ಮನೆಯ ಹಿತ್ತಲಲ್ಲಿ ಹಾಕಿದ್ದರು. ಅದು ಹುಲುಸಾಗಿ ಬೆಳೆದು, ಕೋಲಾರ, ತುಮಕೂರು ಮತ್ತು ಚನ್ನಪಟ್ಟಣದಲ್ಲಿ ಬೆಳೆದಿರುವುದಕ್ಕಿಂತ ಚೆನ್ನಾಗಿ ಆಗಿತ್ತು. ಅಲ್ಲಿ ಹೆಚ್ಚಾಗಿ ಮಳೆ ಆಗುತ್ತಿರುವುದು ಕಾರಣವಾಗಿರಬಹುದು ಮತ್ತು ಅದಕ್ಕೆ ಬೇಕಾದ ಭೂಗುಣ ಚೆನ್ನಾಗಿರಬಹುದು. ಇದನ್ನು ನೋಡಿ ರೇಷ್ಮೆ ವ್ಯವಸಾಯದ ಬಗ್ಗೆ ಮಲೆನಾಡಿನಲ್ಲಿ ಏಕೆ ಪ್ರಯೋಗಮಾಡಿ ನೋಡಬಾರದು ಎಂದೆನ್ನಿಸಿತು. ಇದಕ್ಕೆ ತಕ್ಕ ಸೌಕರ್ಯ ಮತ್ತು ಭೂಗುಣ ಮಲೆನಾಡಿನಲ್ಲಿರಬಹುದು ಎಂದು ನನ್ನ ಭಾವನೆ, ಈ ಪ್ರಯೋಗ ಕೈಗೊಂಡರೆ ಆ ಪ್ರಾಂತ್ಯದಲ್ಲಿಯೂ ಸಹ ಈ ವ್ಯವಸಾಯವನ್ನು ಅಭಿವೃದ್ಧಿಗೊಳಿಸಲು ಅವಕಾಶವಾಗಬಹುದು ಎಂದೆನ್ನಿಸುತ್ತದೆ. ಈ ವಿಚಾರದಲ್ಲಿ ಅಲ್ಲಿ ಶಾಸ್ತ್ರೀಯವಾಗಿ ಪ್ರಯೋಗವಾಗಿಲ್ಲ. ಸಂಬಂಧಪಟ್ಟ ಇಲಾಖೆಯವರು ಶಾಸ್ತ್ರೀಯವಾಗಿ ಅಲ್ಲಿ ಗಿಡಗಳನ್ನು ಬೆಳೆಸುವುದಕ್ಕೆ ಮತ್ತು ಹುಳುಗಳನ್ನು ಸಾಕುವುದಕ್ಕೆ ಅನುಕೂಲವಿದೆಯೋ ಅಥವಾ ಇಲ್ಲವೇ ಎಂಬುದನ್ನು ನೋಡಬೇಕಾಗಿದೆ. ನನ್ನ ಮಿತ್ರರಾದ ಶ್ರೀ ಪಾಪಣ್ಣನವರೇನೋ ಅಲ್ಲಿ ಗಿಡಗಳು ಚೆನ್ನಾಗಿ ಬೆಳೆದರೂ, ಹುಳುಗಳು ಚೆನ್ನಾಗಿ ಅಭಿವೃದ್ಧಿಗೊಳ್ಳುತ್ತವೆಯೋ ಅಥವಾ ಇಲ್ಲವೋ ಎಂಬ ವಿಚಾರದಲ್ಲಿ ಅನುಮಾನವನ್ನು ವ್ಯಕ್ತಪಡಿಸಿದರು. ಆದರೂ ಈ ವಿಚಾರದಲ್ಲಿ ಅಲ್ಲಿ ಪ್ರಯೋಗ ನಡೆಸಬೇಕಾದುದು ಯುಕ್ತವೆಂದು ಹೇಳುತ್ತೇನೆ. ರೇಷ್ಮೆ ಕೈಗಾರಿಕೆಯು ಗೃಹಕೈಗಾರಿಕೆ. ಆದುದರಿಂದ ಈ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸಬೇಕಾದುದು ಅವಶ್ಯಕ. ಒಂದು ಪಕ್ಷ ಹುಳುಗಳು ಅಲ್ಲಿ ಬದುಕುವುದಿಲ್ಲವೆಂದು ಗೊತ್ತಾದರೂ ಮಲೆನಾಡಿಗೆ ಸೇರಿದ ಹಾಗೆ 10-15 ಮೈಲಿ ದೂರದಲ್ಲಿರುವ ಮೈದಾನ ಪ್ರದೇಶದಲ್ಲಿ ಈ ಬಗ್ಗೆ ಅನುಕೂಲತೆಯನ್ನು ಕಲ್ಪಿಸುವುದು ಒಳ್ಳೆಯದು. ಇದರಿಂದ ಅನೇಕ ರೈತರಿಗೆ ಅನುಕೂಲವಾಗಬಹುದು. ಈ ದೃಷ್ಟಿಯಿಂದ ಮಲೆನಾಡಿನಲ್ಲಿ ಪ್ರಯೋಗ ಕ್ಷೇತ್ರ ಒಂದನ್ನು ಪ್ರಾರಂಭಿಸಿ ಪರೀಕ್ಷೆ ನಡೆಸಲು ವ್ಯವಸ್ಥೆ ಮಾಡಬೇಕೆಂದು ಅರಿಕೆ ಮಾಡುತ್ತೇನೆ.

*ಶ್ರೀ ಜಿ. ಪಾಪಣ್ಣ (ಶಿಡ್ಲಘಟ್ಟ-ಚಿಕ್ಕಬಳ್ಳಾಪುರ).—ಶ್ರೀ ಕೆ. ಲಕ್ಕಪ್ಪನವರ ಸಲಹೆಯು ಅಷ್ಟು ಉಚಿತವಾದುದಲ್ಲವೆಂದು ನನ್ನ ಅಭಿಪ್ರಾಯ. ಬೈಲು ಸೀಮೆಯಲ್ಲಿ ರೇಷ್ಮೆ ವ್ಯವಸಾಯ ಚೆನ್ನಾಗಿ ಆಗುತ್ತದೆ ಎಂಬುದು ನಿರ್ಧಾರವಾಗಿ ಗೊತ್ತಾಗಿರತಕ್ಕ ಅಂಶ. ಈ ವ್ಯವಸಾಯ ಮಲೆನಾಡಿನ ಪ್ರದೇಶಕ್ಕೆ ಒಗ್ಗುವುದಿಲ್ಲ. ಅಲ್ಲಿಯ ಹವಾಗುಣ, ಭೂಗುಣ ಈ ವ್ಯವಸಾಯಕ್ಕೆ ವಿರುದ್ಧವಾದುದು. ಆದುದರಿಂದ ಈ ಬಗ್ಗೆ ಏನು ಪ್ರಯೋಗ ಕೈಗೊಂಡರೂ ನಷ್ಟವಾಗುತ್ತದೆ. ಇದಕ್ಕೆ ಬದಲು ಬಯಲುಸೀಮೆಯಲ್ಲಿಯೇ ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಯ ಭಾಗಗಳಲ್ಲಿ ಈ ಪ್ರಯೋಗ ಕ್ಷೇತ್ರಗಳನ್ನು ಹೆಚ್ಚಿಸಿ, ಹೆಚ್ಚು ಪ್ರಚಾರ ಮಾಡುವುದರಿಂದ ಅಲ್ಲಿಯ ಜನರಿಗೆ ಉದ್ಯೋಗ ದೊರಕುವುದಲ್ಲದೆ ಈ ವ್ಯವಸಾಯವನ್ನು ಸಹ ಪ್ರೋತ್ಸಾಹಿಸಿದಂತಾಗುತ್ತದೆ. ಈ ಕಾರಣದಿಂದ ಮಲೆನಾಡಿನಲ್ಲಿ ಇದನ್ನು ಮಾಡುವುದರಿಂದ ಉಪಯೋಗವಿಲ್ಲವೆಂದು ನನ್ನ ಖಚಿತವಾದ ಅಭಿಪ್ರಾಯ.

Mr. SPEAKER.—You have got to speak on the motion. There is no time.

ಶ್ರೀ ಜಿ. ಪಾಪಣ್ಣ.—ಈ ಡಿಮ್ಯಾಂಡಿನ ಮೇಲೆ ಇನ್ನೊಂದೆರಡು ಮಾತುಗಳನ್ನ ಹೇಳುತ್ತೇನೆ. C. Development schemes—sericulture ಎಂದು ಹೇಳಿ 1 ಲಕ್ಷ 72 ಸಾವಿರ ರೂಪಾಯಿಗಳನ್ನು ಕೇಳಿದ್ದೀರಿ. ಇದನ್ನು ಈ ಡಿಮ್ಯಾಂಡಿನಲ್ಲಿ ಏಕೆ ಕೇಳಿದ್ದೀರೋ ನನಗಂತೂ ಆಶ್ಚರ್ಯವಾಗುತ್ತಿದೆ. ಈ 1 ಲಕ್ಷ 72 ಸಾವಿರ ರೂಪಾಯಿಗಳನ್ನು ಏತಕ್ಕಾಗಿ ಉಪಯೋಗಿಸುತ್ತೀರಿ ಎಂದರೆ 1942ನೇ ಇಸವಿಯಲ್ಲಿ ಪ್ಯಾರಾಚೂಟ್‌ಗಾಗಿ ಕೊಂಡುಕೊಂಡ ರೇಷ್ಮೆ condemn ಆಗಿತ್ತು. ಅದಕ್ಕೆ ಕೇಂದ್ರ ಸರ್ಕಾರದವರು ಕೊಡಬೇಕಾಗಿದ್ದ ಹಣ ಕೊಡುವುದಕ್ಕೆ ತಿರಸ್ಕರಿಸಿದ್ದರಿಂದ ಈಗ ಕೇಳುತ್ತಾ ಇದ್ದೀರಿ. ಇದು ಸರಿಯೇ? ಮೈಸೂರು ಸರ್ಕಾರದವರಾದರೂ ಇದು ಹೇಗೆ ಸರಿ ಎಂದು ಒಪ್ಪಿಕೊಳ್ಳುತ್ತೀರಿ ಎಂದು ಪ್ರಶ್ನಿಸುತ್ತೇನೆ. ಈ ಹಳೆಯ ಬಾಕಿಗೆ 12 ವರ್ಷ ಲಿಮಿಟೇಷನ್ ಕೂಡ

(ಶ್ರೀ ಜಿ. ಪಾಪಣ್ಣ.)

ಮೀರಿ ಹೋಗಿದೆ. 12 ವರ್ಷಗಳಿಂದ ಬಾಕಿ ನಿಲ್ಲಿಸಿಕೊಂಡು ಬಂದು ಈಗ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಏಕೆ ಇಡಬೇಕಾಗಿತ್ತೋ ನನಗಂತೂ ಅರ್ಥವಾಗುವುದಿಲ್ಲ. ಈ ದುಡ್ಡನ್ನು ಯಾವುದರಿಂದ ಕೊಡುತ್ತೀರಿ ಎಂಬುದನ್ನು ನೋಡಿದ್ದೇ ಆದರೆ, ಸಿಲ್ಕ್ ಇಂಡಸ್ಟ್ರೀ ಫಂಡ್‌ನಿಂದ ಕೊಡುತ್ತೀರಿ. ಈ ಸಿಲ್ಕ್ ಇಂಡಸ್ಟ್ರೀ ಫಂಡು ಎಲ್ಲಿಂದ, ಯಾರಿಂದ ಬಂತು, ಈ ರೀತಿ ಕೊಡುವುದು ನ್ಯಾಯವೇ ಎಂಬುದನ್ನು ಖಂಡಿತವಾಗಿಯೂ ಕೂಡ ತೀವ್ರವಾಗಿ ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಬೇಕು. ಮತ್ತು ಇದು ಕೇಂದ್ರ ಸರ್ಕಾರದವರೇ ಕೊಡಬೇಕಾದದ್ದು, ಸಂಸ್ಥಾನ ಸರ್ಕಾರದವರು ಕೊಡಬೇಕಾದ್ದಿಲ್ಲವಾದುದರಿಂದ ನಮ್ಮ ಸರ್ಕಾರದ ಫಂಡ್‌ನಿಂದ ಕೊಡುವುದಕ್ಕಾಗುವುದಿಲ್ಲ ಎಂಬುದನ್ನು ಕೇಂದ್ರ ಸರ್ಕಾರದವರಿಗೆ ಒತ್ತಾಯವಾಗಿ ತಿಳಿಸಿ ಅವರೇ ಇದನ್ನು ವಹಿಸಿಕೊಳ್ಳುವಂತೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಸ್ವಾಮಿ, ಶ್ರೀಮಾನ್ ಪಾಪಣ್ಣನವರು ಹೇಳಿದ ಪ್ರಕಾರ ಈ 1 ಲಕ್ಷ 72 ಸಾವಿರ ರೂಪಾಯಿಗಳನ್ನು ಕೊಡಬೇಕಾದದ್ದು book adjustment. ಅವರು ತಿಳಿಸಿದ ಹಾಗೆ ಇದು 1942 ರಿಂದ ಲೆಕ್ಕದಲ್ಲಿ ಉಳಿದುಕೊಂಡು ಬಂದಿರತಕ್ಕ ಮೊಬಲಗು. ಆಗ ಕಕೂನ್ ಕಂಟ್ರೋಲ್ ಸ್ಕೀಂ ಎಂದು ಹೇಳಿ ಒಂದು ಸ್ಕೀಂಮಾಡಿ ಪ್ಯಾರಾಚ್ಯೂಟ್ ಸಿಲ್ಕ್ ಮಾಡಲಿಕ್ಕೂ ಮತ್ತು ಸಿಲ್ಕ್ ಇಂಡಸ್ಟ್ರೀ ಡೆವಲಪ್ ಮಾಡಲಿಕ್ಕೂ ಇಂಡಿಯಾ ಸರ್ಕಾರದವರು ಮೈಸೂರು ಸರ್ಕಾರದವರಿಗೆ ಒಂದು ಸ್ಕೀಂ ಕೊಟ್ಟರು. ಅದಕ್ಕೆ 1 ಲಕ್ಷ 72 ಸಾವಿರ ರೂಪಾಯಿಗಳಾದವು. ಅದನ್ನು 1945-46ನೇ ಇಸವಿಯಲ್ಲಿ ಅವರನ್ನು ಕೇಳಿದೆವು, ನಿಮಗಾಗಿಯೇ ಮಾಡಿದ್ದು, ನೀವೇ ಕೊಡಬೇಕು ಎಂದು. ಅದಕ್ಕೆ ಅವರು long range and short range advantages ಮೈಸೂರು ಸರ್ಕಾರದವರಿಗೆ ಬಹಳವಾಗಿ ಲಭಿಸಿದೆ, ಪ್ರತ್ಯಕ್ಷವಾಗಿ ಮತ್ತು ಅಪ್ರತ್ಯಕ್ಷವಾಗಿ ಸಿಲ್ಕ್ ಇಂಡಸ್ಟ್ರೀ ಮೈಸೂರು ದೇಶದಲ್ಲಿ ಸತತವಾಗಿ ಅಭಿವೃದ್ಧಿ ಹೊಂದಲು ಅನುಕೂಲವಾಗುವಂತಾಗಿದೆ ಆದ್ದರಿಂದ ನೀವೇ ಹೊರಬೇಕು ಎಂದು ಹೇಳಿದರು. ಆ ಪತ್ರ ವ್ಯವಹಾರ ಅನೇಕ ದಿವಸ ನಡೆದು ಫೈನಲ್ ಆಗಿ ಇಂಡಿಯಾ ಸರ್ಕಾರದವರು ನೀವೇ ಕೊಡಬೇಕು ಎಂದು ಹೇಳಿದ್ದರಿಂದ ಈ ಒಂದು ಸಣ್ಣ ಮೊಬಲಗಿಗಾಗಿ ಜಿಜ್ಞಾಸೆ ಮಾಡುವುದು ಸರಿಯಲ್ಲ ಎಂದು ಹೇಳಿ ಫೈನಲ್ ಆಗಿ ಅಕೌಂಟ್ ಕ್ಲೋಸ್ ಮಾಡಿದೆವು. 1947ರಲ್ಲಿ ಪಾರ್ಟಿಷನ್ ಆದ ಕಾಲದಲ್ಲಿ ಈ ರೀತಿ ತೀರ್ಮಾನವಾಗಿದೆ ಎಂದು ಹೇಳಿದಮೇಲೆ ನಾವು ಇದನ್ನು ಕೊಡಲಿಕ್ಕೆ ಒಪ್ಪಿಕೊಳ್ಳಬೇಕಾಯಿತು. ಶ್ರೀಮಾನ್ ಪಾಪಣ್ಣನವರು ಹೇಳಿದಹಾಗೆ, ಸಿಲ್ಕ್ ಫಂಡ್‌ನಿಂದ ಈ ಹಣವನ್ನು ಅಕೌಂಟೆಂಟ್ ಜನರಲ್‌ರವರು ಅಡ್ಜಸ್ಟ್ ಮಾಡಿದ್ದಾರೆ. ಈ ಸಭೆಯ ಅನುಮತಿಯಿಂದ ಈ ಲೆಕ್ಕವನ್ನು ಕ್ಲೋಸ್ ಮಾಡಲೇಬೇಕಾಗಿರುವುದರಿಂದ ಇದನ್ನು ಸಭೆಯ ಮುಂದೆ ತರಲಾಗಿದೆ. ಇದು ಬಹಳ ಹಳೆಯ ಲೆಕ್ಕವಾಗಿರುವುದರಿಂದ ಮಾನ್ಯ ಸಭೆಯವರು ಇದಕ್ಕೆ ಮನ್ನಣೆ ಕೊಟ್ಟು ಅನುಮತಿ ಕೊಡಬೇಕೆಂದು ಬೇಡಿಕೊಳ್ಳುತ್ತೇನೆ.

ಇನ್ನೊಂದು ಅಂಶವನ್ನು ಶ್ರೀಮಾನ್ ಲಕ್ಕಪ್ಪನವರು ಹೇಳಿದ್ದಾರೆ. ಮಲೆನಾಡಿನಲ್ಲಿ ಈ ಸಿಲ್ಕ್ ಇಂಡಸ್ಟ್ರೀಗೆ ಪ್ರೋತ್ಸಾಹ ಕೊಡುವುದಕ್ಕಾಗಿ ಯಾವ ಒಂದು ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ ಎಂದು ಹೇಳಿದರು. 1945ರಲ್ಲಿ ಮಲೆನಾಡಿನ ಕೆಲವು ಕ್ಷೇತ್ರಗಳಲ್ಲಿ ಪ್ರಾಯೋಗಿಕವಾಗಿ ಇದನ್ನು ಮಾಡಲಾಯಿತು. ಆದರೆ ಅದು ಜಯಪ್ರದವಾಗಿ ನಡೆಯಲಿಲ್ಲ. ಎರಡನೆಯದು ಹವಾಗುಣದ ದೆಶೆಯಿಂದ ಈ ಹುಳು ಸರಿಯಾಗಿ ಬೆಳೆಯದೆ ಎಷ್ಟು ಬರಬೇಕೋ ಅಷ್ಟು ಬರದೇಹೋಯಿತು. ಅದೇ ಕಾಲದಲ್ಲಿ ಅರೆ ಮಲೆನಾಡಾದ ಹೊನ್ನಾಳಿ ಕ್ಷೇತ್ರದಲ್ಲಿ ಪ್ರಯೋಗವಾಯಿತು. ಈಗಲೂ ಸಹ ರಿಸರ್ಚ್ ಎಕ್ಸ್‌ಪರ್ಟಿಗೆ ಅಲ್ಲಿ ಪುನಃ ಪ್ರಯತ್ನಮಾಡಿ ನೋಡಿ ಎಂದು ಬೇಕಾದರೆ ಹೇಳುತ್ತೇನೆ. ಆದರೆ ಇದುವರೆಗೂ ಆಗಿರತಕ್ಕ ಪ್ರಯೋಗದಿಂದ ನಮಗೆ ಅಷ್ಟು ಚೆನ್ನಾಗಿ ಆಗುತ್ತದೆ ಎಂದು ಕಂಡು ಬಂದಿಲ್ಲ ಎಂಬ ವಿಷಯವನ್ನು ಸಭೆಯ ಮುಂದೆ ಇಡುತ್ತೇನೆ.

Mr. SPEAKER.—Next Demand.

DEMAND No. 40—IRRIGATION

68 Construction of I.N.E. and D. Works outside the Revenue Account.

Necessity to give employment to local people and contractors in Bhadra Project and Channels works.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಈ ಭದ್ರಾಜಲಾಶಯದಲ್ಲಿ ಭದ್ರಾ ಅಣೆಕಟ್ಟು ಕಟ್ಟುತ್ತಾ ಇರುವುದು ತಮಗೆ ತಿಳಿದೇ ಇದೆ. ಇಲ್ಲಿ ನಮ್ಮ ಮೈಸೂರು ಸಂಸ್ಥಾನದ ಅನೇಕ ಕಂಟ್ರಾಕ್ಟರುಗಳು ಕೆಲಸದಲ್ಲಿ ನಿರತರಾಗಿದ್ದಾರೆ. ಈಗ ನೋಡಿದ್ದರಲ್ಲಿ ಡಿಪಾರ್ಟ್‌ಮೆಂಟಿನವರು ಯಾವ ಕಂಟ್ರಾಕ್ಟರುಗಳಿಗೆ ಬರವಣಿಗೆ ಬರುವುದಿಲ್ಲವೋ, ಓದಲಿಕ್ಕೆ ತಿಳಿಯುವುದಿಲ್ಲವೋ ಅಂತಹ ಕಂಟ್ರಾಕ್ಟರುಗಳಿಗೆ—ಹೆಬ್ಬೆಟ್ಟಿನ ಗುರುತು ಹಾಕತಕ್ಕ ಕಂಟ್ರಾಕ್ಟರುಗಳಿಗೆ ಹೆಚ್ಚು ಪುರಸ್ಕಾರ ಕೊಡುತ್ತಾ ಇದ್ದಾರೆ. ಅವರಿಗೆ ಉದ್ಯೋಗ ಸಿಕ್ಕುತ್ತಾ ಇದೆ, ಅದನ್ನು ತಪ್ಪಿಸಬೇಕು ಎಂಬ ದೃಷ್ಟಿಯಿಂದ ಹೇಳುತ್ತಾ ಇಲ್ಲ. ಡಿಪಾರ್ಟ್‌ಮೆಂಟಿನಲ್ಲಿರತಕ್ಕ ಕೆಲವು ಕೆಲಸಗಾರರು ತಮ್ಮ ಅನುಕೂಲತೆಗೆ, ತಾವೇ ಎಷ್ಟು ಕೆಲಸವಾಡಿದರೆ ಎಷ್ಟಾಗುತ್ತದೆ, ಎಷ್ಟು ಕೆಲಸ ಮಾಡಿದರೆ ಅನುಕೂಲ ಎಂಬ ಯಾವ ತಿಳುವಳಿಕೆಯೂ ಇಲ್ಲದೇ ಇರತಕ್ಕ ಅವನಿಂದ ಸುಮ್ಮನೆ ಇಷ್ಟು ಉದ್ದ ಆಗಿ, ಇದನ್ನು ಮಾಡು ಎಂದು ಹೇಳಿ ಕೆಲಸ ಮಾಡಿಸಿಕೊಂಡು ಬಿಲ್ಲನ್ನು ತಾವೇ ಮಾಡಿ ಅದನ್ನು ಮಂಜೂರು ಮಾಡಿಸಿಕೊಂಡು ಅವನಿಗೆ ಹಣ ಕೊಡತಕ್ಕ ಸಂದರ್ಭದಲ್ಲಿ ಯಾವುದೋ ಒಂದು ಲೆಕ್ಕ ಹಾಗಿದೆ, ಹೀಗಿದೆ ಎಂದು ತಕರಾರು ಮಾಡಿ ಹಣಕೊಡುತ್ತಾರೆ. ಅನೇಕ ವೇಳೆ ಈ ಕಂಟ್ರಾಕ್ಟರುಗಳಿಗೆ ಆ ಪ್ರದೇಶದಲ್ಲಿ ಮನೆ ಮಠ ಏನೂ ಇರುವುದಿಲ್ಲ, ಆಡಳಿತ ಖರ್ಚು ಇರುವುದಿಲ್ಲ. ಎಲ್ಲಿಂದಲೋ ಬರುತ್ತಾರೆ, ಯಾವುದೋ ಜನಗಳನ್ನು, ಕೂಲಿಯವರನ್ನು ಇಟ್ಟುಕೊಂಡು ಅಲ್ಲಿ ಕೆಲಸ ಪ್ರಾರಂಭ ಮಾಡುತ್ತಾರೆ. ಹೀಗೆ ಮೈಸೂರು ದೇಶದಲ್ಲಿ ಕಂಟ್ರಾಕ್ಟರಗಳಾಗಿ ಬಂದು ಈ ರೀತಿ ಅವರು ಜೀವನ ನಡೆಸುತ್ತಾ ಇದ್ದಾರೆ. ಎಲ್ಲಿಂದಲೋ ಬಂದಿರತಕ್ಕ ಈ ಜನರಿಂದ ಪ್ರತಿನಿತ್ಯದ ಖರ್ಚು ಹೆಚ್ಚಾಗಿರುವಾಗಲೂ ಸಹ ಕಡಮೆ ದರದ ಮೇಲೆ ಎಸ್ಟಿಮೇಟು ಅಪ್ರೂವ್ ಮಾಡಿಸಿ ಕೆಲಸ ಪ್ರಾರಂಭವಾದನಂತರ ಅಥವಾ ಕೆಲಸ ಮುಗಿದ ಮೇಲೆ ಇದು ಹಾಗೆ ಆಯಿತು, ಹೀಗೆ ಆಯಿತು, ರಿವೈಸ್ಡ್ ಎಸ್ಟಿಮೇಟು ಆಗಬೇಕು, ಹಳೇ ಎಸ್ಟಿಮೇಟು ಬದಲಾವಣೆ

ಮಾಡಬೇಕು ಎಂದು ಹೇಳಿ ಬದಲಾವಣೆಮಾಡಿಸಿ ಹಣ ಖರ್ಚು ಮಾಡುತ್ತಾ ಇದ್ದಾರೆ ಎಂದು ಅನೇಕರಿಂದ ನನಗೆ ತಿಳಿದು ಬಂದಿದೆ. ವಾಸ್ತವವಾಗಿಯೂ ನಮ್ಮ ಮೈಸೂರಿನಲ್ಲಿರತಕ್ಕವರು ಹಳ್ಳಿನಾಡಿನ ಜನರು ತಮಗೆ ಕೆಲಸ ಇಲ್ಲದೇ ಇರತಕ್ಕ ಸಮಯದಲ್ಲಿ ಅಲ್ಲಿ ಕೆಲಸ ಕೊಡಿ ಎಂದು ಅನೇಕ ಸಂದರ್ಭಗಳಲ್ಲಿ ಕೇಳಿದಾಗ್ಯೂ ಅಲ್ಲಿ ಕೆಲಸ ದೊರೆಯುವುದಿಲ್ಲ. ಅದೇ ಹೊರಗಡೆಯಿಂದ ಅನೇಕ ಜನರು ಇಲ್ಲಿಗೆ ಬಂದು ಸಣ್ಣ ಸಣ್ಣ ಗುಡಿಸಲುಗಳನ್ನು ಹಾಕಿಕೊಂಡು ಇರತಕ್ಕಂಥ ಜನರಿಗೆ ಕಂಟ್ರಾಕ್ಟು ಗಳನ್ನು ಕೊಟ್ಟು ಹಳ್ಳಿ ಜನರಿಗೆ ಕೆಲಸ ದೊರೆಯದಂತೆ ಮಾಡಿರತಕ್ಕ ಅನೇಕ ಸಂದರ್ಭಗಳು ಇವೆ. ಹೊನ್ನಾಳಿ ತಾಲ್ಲೂಕಿನಲ್ಲಿ 2,000 ಜನರು ಹೊರಗಡೆಯಿಂದ ಬಂದು ಕೆಲಸ ಮಾಡುತ್ತಾ ಇದ್ದಾರೆ. ಈ ಸಣ್ಣ ಪುಟ್ಟ ಕಂಟ್ರಾಕ್ಟುಗಳಿಗೆ ನಮ್ಮಲ್ಲಿರತಕ್ಕ ಜನರು ಹೋಗಿ, ಸ್ವಾಮಿ ಅಲ್ಲಿ ಚಾನಲ್ ತೆಗೆಯುವ ಕೆಲಸ ಇದೆ, ಇಲ್ಲಿ ಇನ್ನೊಂದು ಕೆಲಸ ಇದೆ, ಆ ಕೆಲಸ ನಮಗೆ ಕೊಡಿ ಎಂದರೆ ಅದನ್ನು ಗಣನೆಗೆ ತೆಗೆದುಕೊಳ್ಳದೆ ಹೊರಗಡೆಯಿಂದ ಬಂದಿರತಕ್ಕ ಯಾವನೋ ಒಬ್ಬನಿಗೆ ಕಂಟ್ರಾಕ್ಟ್ ಕೊಟ್ಟಿರತಕ್ಕ ಸಂದರ್ಭಗಳು ಅನೇಕ ವಿವೆ. ಈಗ ಭದ್ರಾ ಚಾನಲ್ಲಿನಲ್ಲಿ ಎಡಗಡೆ ಚಾನಲ್ಲಿನ ಕೆಲಸ ನಡೆಯುತ್ತಾ ಇದೆ. ಅಲ್ಲೂ ಕೂಡ ಈ ಕಂಟ್ರಾಕ್ಟ್ ಕೆಲಸ ಮಾಡುವುದಕ್ಕೆ ಹಳ್ಳಿಗಾಡಿನ ಜನರು ಬಂದು ಕೆಲಸ ಕೇಳುತ್ತಾರೆ. ಅಂಥ ಸಂದರ್ಭದಲ್ಲಿ ಬೇರೆಯವರಿಗೇ ಕೆಲಸ ಕೊಟ್ಟ ಹಾಗಾಯಿತು, ಹೀಗಾಯಿತು ಎಂದು ಹೇಳುವುದು ಮತ್ತು ಅಳತೆ ಕೆಲಸ ಮಾಡಿರತಕ್ಕದ್ದು ಎಷ್ಟು ಆಗಿದೆಯೋ ಅಷ್ಟು ಹಣ ಕೊಡಿಸಿ ಎಂದರೆ ತಕರಾರು ಮಾಡಿ 10-15 ದಿವಸ ಒಂದು ತಿಂಗಳು ಸತಾಯಿಸಿ ಅವರಲ್ಲಿರುವ ಹಣ ಎಲ್ಲಾ ಖರ್ಚಾಗಿ ಅವರಿಗೆ ನಷ್ಟವಾಗುವಂತೆ ಮಾಡಿ ತೊಂದರೆ ಕೊಟ್ಟಿದ್ದಾರೆ. ಇದೂ ಅಲ್ಲದೆ ಸಣ್ಣ ಪುಟ್ಟ ಕಂಟ್ರಾಟ್ರುಗಳು ತಮ್ಮ ಕೈಗಳಗೆ 15-20 ಜನ ಕೂಲಿಗಾರರನ್ನು ಇಟ್ಟುಕೊಂಡು ಕೆಲಸ ಮಾಡತಕ್ಕ ಸಂದರ್ಭದಲ್ಲಿ ಹೊರಗಡೆಯಿಂದ ಬಂದಿರುವ ಕಂಟ್ರಾರುಗಳು ಒಗ್ಗಟ್ಟಾಗಿ ಈ ಸಣ್ಣ ಕಂಟ್ರಾಕ್ಟರ ಹತ್ತಿರ ಕೆಲಸ ಮಾಡುತ್ತಿರುವ ಕೂಲಿಯವರನ್ನು ತಪ್ಪಿಸಿ ಅವರಿಗೆ ನಷ್ಟವಾಗುವಂತೆ ಮಾಡುತ್ತಾ ಇದ್ದಾರೆ ಮತ್ತು ಅವರು ಮುಂದೆ ಕಂಟ್ರಾಕ್ಟು ಮಾಡದೇ ಇರುವುದಕ್ಕೆ ಎಷ್ಟು ಬೇಕೋ ಅಷ್ಟು ಮಾಡುತ್ತಾ ಇದ್ದಾರೆ ಎಂಬುದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇದನ್ನೆಲ್ಲಾ ತಪ್ಪಿಸುವುದಕ್ಕೆ ಸರ್ಕಾರದವರು ತಾವಾಗಿಯೇ ಈ ಕಂಟ್ರಾಕ್ಟರುಗಳ ವ್ಯವಸ್ಥೆಯನ್ನು ಮಾಡಿ, ಅವರ ಕೈಕೆಳಗೆ ಎಷ್ಟು ಜನ ಇದ್ದಾರೆ ಎಂಬುದಕ್ಕೆ ರಿಜಿಸ್ಟರ್ ಇಟ್ಟು, ಒಬ್ಬರ ಕೂಲಿಕಾರರನ್ನು ಮತ್ತೊಬ್ಬರು ಕರೆದುಕೊಳ್ಳದಂತೆ ನಿರ್ದಿಷ್ಟವಾಗಿ ತೀರ್ಮಾನವನ್ನು ಮಾಡಬೇಕು ಮತ್ತು ಕಂಟ್ರಾಕ್ಟರುಗಳನ್ನು ಒಂದನೇ ಗ್ರೇಡು, ಎರಡನೇ ಗ್ರೇಡು, ಮೂರನೇ ಗ್ರೇಡು ಎಂದು ವಿಂಗಡಿಸಿ ರಿಜಿಸ್ಟರ್ ಮಾಡಿ ಅದರಂತೆ ಕೆಲಸ ನಿರ್ದಿಷ್ಟವಾಗಿ ಹಂಚಬೇಕು. ಈ ಚಾನಲ್ ಎಲ್ಲೆಲ್ಲಿ ಹೋಗಿದೆಯೋ ಅಲ್ಲೆಲ್ಲಾ ಆಯಾ ಗ್ರಾಮಸ್ತರೇ ಕೆಲಸ ಮಾಡಿಸಬೇಕು ಎಂದು ಹೇಳಿದರೆ ಅವರಿಗೆ ಕೆಲಸ ಒದಗುತ್ತದೆ. ಹಾಗೆ ಮಾಡಬೇಕು. ಮದರಾಸು ಪ್ರಾಂತದಿಂದ ಬಂದಿರತಕ್ಕ ಆ ಜನರ ಸಂಪಾದನೆ ಏನು, ಎಷ್ಟರ ಮಟ್ಟಿಗೆ ದುಡ್ಡು ಮಾಡುತ್ತಾ ಇದ್ದಾರೆ ಎಂಬುದನ್ನು ನೋಡಿದರೆ ಲಕ್ಷಾಂತರ ರೂಪಾಯಿಗಳನ್ನು ಅವರು ತಮ್ಮ ಸಂಸಾರಕ್ಕೆ ಕಳುಹಿಸುತ್ತಾ ಇದ್ದಾರೆ ಎಂಬುದು ಪೋಸ್ಟಾಫೀಸಿನ ಮುಖೇನ ಗೊತ್ತಾಗುತ್ತದೆ. ಅದೇ ಇಲ್ಲಿರತಕ್ಕ ನಮ್ಮ ಹಳ್ಳಿಯ ಜನರು ಕೆಲಸ ಇಲ್ಲದೆ ಅಲ್ಲಿ ಇಲ್ಲಿ ಅಲೆಯುತ್ತಾ ಇದ್ದಾರೆ. ಇದನ್ನು ಈ ಹಿಂದೆ ಮಾನ್ಯ ಮಂತ್ರಿಗಳ ಗಮನಕ್ಕೂ ಸಹ ತಂದಿದ್ದೇನೆ. ಆದ್ದರಿಂದ ಈ ಅಂಶಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಕಂಟ್ರಾಕ್ಟ್ ಕೊಡುವಾಗ ಸಾಧ್ಯವಾದ ಮಟ್ಟಿಗೂ ಆಯಾ ಸ್ಥಳದ ಜನಗಳಿಗೇ ಹೆಚ್ಚು ಅವಕಾಶ ಮಾಡಿಕೊಡಬೇಕೆಂದು ಹೇಳಿ ಸಂಬಂಧಪಟ್ಟ ಇಲಾಖೆಯವರಿಕೆ ತಿಳಿವಳಿಕೆ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಟಿ. ಸಿ. ಬಸಪ್ಪ (ತರೀಕೆರೆ).—ಸ್ವಾಮಿ, ಭದ್ರಾ ಅಣೆಕಟ್ಟಿನ ಬಲ ಭಾಗದ ಚಾನಲ್‌ನಲ್ಲಿ ಈಗ ಯಾವ ತರಹ ಕೆಲಸ ನಡೆಯುತ್ತಾ ಇದೆ ಎಂಬ ಬಗ್ಗೆ ನನ್ನ ಕೆಲವು ಅನುಭವಗಳನ್ನು ಸರ್ಕಾರದ ಮುಂದೆ ಇಡಬೇಕೆಂದು ಬಯಸುತ್ತೇನೆ. ಈ ಭದ್ರಾ ಚಾನಲ್‌ನಲ್ಲಿ ಈಗಾಗಲೇ ಅನೇಕ ಕಂಟ್ರಾಕ್ಟರುಗಳು ಅನೇಕ ಗ್ರೇಡುಗಳ ಕೆಲಸ ಮಾಡುವ ಕಂಟ್ರಾಕ್ಟುಗಳನ್ನು ಹೊಂದಿದ್ದಾರೆ. ಕೆಲವು ಕಂಟ್ರಾಕ್ಟರುಗಳು ಅಧಿಕಾರಿಗಳ ಸಹಕಾರದಿಂದಲೋ ಅಥವಾ ಬೇರೆ ರೂಪಗಳ ಮೂಲಕವೋ ಹೆಚ್ಚು ಗ್ರೇಡುಗಳ ಕಂಟ್ರಾಕ್ಟನ್ನು ಅವನ ಕೈ ಕೆಳಗೆ ಇರತಕ್ಕ ಹೆಬ್ಬೆಟ್ಟು ಒತ್ತತಕ್ಕ ಕೂಲಿಗಾರರ ಹೆಸರಿನಲ್ಲಿ $\frac{1}{2}$ ಗ್ರೇಡು, $\frac{1}{4}$ ಗ್ರೇಡು ಹೀಗೆಲ್ಲಾ ಮಂಜೂರುಮಾಡಿಸಿಕೊಂಡು ಆ ಮೇಲೆ ಸ್ಥಳೀಯ ಜನರು ಯಾರಾದರೂ ಬಂದರೆ, ನಫೆ ತೆಗೆದುಕೊಂಡು ಅವರಿಗೆ ಸಬ್ ಕಂಟ್ರಾಕ್ಟ್ ಕೊಡಲಿಕ್ಕೆ ಪ್ರಾರಂಭಿಸಿದ್ದಾರೆ. ಇದರಿಂದ ಆಗಿರುವ ದುಷ್ಪರಿಣಾಮವೇನೆಂದರೆ, ಹೆಚ್ಚು ಕಮ್ಮಿ ಸ್ಥಳೀಯವಾಗಿ ಕೆಲಸಮಾಡತಕ್ಕ ಕಂಟ್ರಾಕ್ಟರುಗಳಿಗೂ ಮತ್ತು ಅನುಭವಸ್ಥರಾದ ಅಥವಾ ವಿದ್ಯಾವಂತರಾದ ಕಂಟ್ರಾಕ್ಟರುಗಳಿಗೂ ಕೆಲಸ ಸಿಕ್ಕದೆ ಸರಿಯಾದ ಕಡೆ ಅಥವಾ ಸಾಕಾದಷ್ಟು ಕೆಲಸ ಸಿಕ್ಕದೆಹೋಗಿದೆ. ಇದೂ ಅಲ್ಲದೆ ನನ್ನನ್ನು ಭಾಧಿಸುವ ಇನ್ನೊಂದು ಅನುಮಾನವೇನೆಂದರೆ, ಈ ರೀತಿ ಮಾಡುವುದರಿಂದ ಸರಿಯಾಗಿ ಕೆಲಸ ಮತ್ತು ಅದಕ್ಕೆ ಸರಿಯಾದ ಬಿಲ್ ಆಗುತ್ತಿವೆಯೋ, ಇಲ್ಲವೇ ಎಂಬ ಅನುಮಾನವೂ ಸಹ ಭಾಧಿಸುತ್ತಾ ಇದೆ. ಈ ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೂ ಸಹ ತಂದಿದ್ದೇವೆ. ಅತಿ ಜಾಗ್ರತೆಯಾಗಿ, ಅತಿ ಜರೂರಾಗಿ ಏನಾದರೂ ಮಾಡಿ ಇದಕ್ಕೆ ನಿವಾರಣೆ ಕಂಡುಹಿಡಿಯಬೇಕು. ಈಗಾಗಲೇ ಶ್ರೀ ನಾಗಪ್ಪಶೆಟ್ಟಿಯವರು ಸೂಚನೆ ಮಾಡಿದ್ದಾರೆ. ಈ ಕಂಟ್ರಾಕ್ಟರುಗಳ ಒಂದು ಪಟ್ಟಿಯನ್ನು ತಯಾರು ಮಾಡಿ ಅವರ ಕೈ ಕೆಳಗೆ ಎಷ್ಟು ಜನ ಕೂಲಿಗಾರರು ಇದ್ದಾರೆ ಎಂಬುದನ್ನು ನೋಡಿಕೊಂಡು ಎಕ್ಸಿಕ್ಯುಟಿವ್ ಇಂಜನಿಯರುಗಳು ಅವುಗಳನ್ನು ಹಂಚಿಕೊಟ್ಟಪಕ್ಷದಲ್ಲಿ ನಿಜವಾಗಿಯೂ ಈ ರೀತಿ ಆಗುತ್ತಾ ಇರುವುದು ತಪ್ಪುತ್ತದೆ ಎಂದು ಭಾವಿಸುತ್ತೇನೆ.

4 P.M.

ಶ್ರೀ ಎಸ್. ಸಿದ್ದಪ್ಪ (ಮಾಗಡಿ)—ಶ್ರೀ ಬಸಪ್ಪನವರು ಹೇಳಿದ್ದನ್ನು ಕೇಳಿದ್ದೇನೆ. ಕಂಟ್ರಾಕ್ಟನ್ನು ವಿದ್ಯಾವಂತರಿಗೆ ಮಾತ್ರ ಕೊಡಬೇಕು, ಅವಿದ್ಯಾವಂತರಿಗೆ ಕೊಡಕೂಡದು ಎಂದು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ. ವಿದ್ಯಾವಂತರಿಗೆ ಕಂಟ್ರಾಕ್ಟ್ ಕೊಡುವುದು ಸ್ವಾಭಾವಿಕವಾದರೂ ಬೇಲೂರು ಮತ್ತು ಹಳೇಬೀಡುಗಳಲ್ಲಿರುವ ಕಟ್ಟಡಗಳನ್ನು ಕಟ್ಟಿದವರು ಮತ್ತು ದೊಡ್ಡ ದೊಡ್ಡ ಕೆರೆಗಳನ್ನು ಕಟ್ಟಿದವರು ಅವಿದ್ಯಾವಂತರೇ ಹೊರತು ವಿದ್ಯಾವಂತರಲ್ಲ. ವಿದ್ಯಾವಂತರಿಗೇ ಹೆಚ್ಚು ಮಾನ್ಯತೆ ಕೊಟ್ಟರೆ ಬಡವರು, ಕೂಲಿ ಮಾಡುವವರು ಮುಂತಾದವರ ಗತಿಯೇನು ? ದೇಶದಲ್ಲಿ

(ಶ್ರೀ ಎಸ್ ಸಿದ್ದಪ್ಪ)

ಬಡವರ ಸಂಖ್ಯೆ ಜಾಸ್ತಿಯಾಗಿದೆ. ದೊಡ್ಡ ದೊಡ್ಡ ಕಂಟ್ರಾಕ್ಟರುಗಳು ಒಗ್ಗಟ್ಟಾಗಿ ಹೆಚ್ಚು ದರ ಪಡೆಯಲು ಪ್ರಯತ್ನಮಾಡುತ್ತಾರೆ. ಚಿಕ್ಕ ಚಿಕ್ಕ ಕಂಟ್ರಾಕ್ಟರುಗಳಿಗೆ, ಬಡವರಿಗೆ ಕಂಟ್ರಾಕ್ಟು ಕೊಡುವುದು ಪ್ರಜಾಪ್ರಭುತ್ವ ಬಂದಮೇಲೆ ಹೆಚ್ಚಾಗಿದೆ. ಶ್ರೀ ಮರಿಯಪ್ಪನವರು ಸರ್ಕಾರದಲ್ಲಿದ್ದಾಗ ಬಡವರಿಗೆ ಮತ್ತು ಕೆಲಸ ನಡೆಯುವ ಊರುಗಳಲ್ಲಿರುವ ಕೆಲಸಗಾರರಿಗೆ ಅಲ್ಲಿನ ಕೆಲಸಗಳನ್ನು ಕೊಡುತ್ತಿದ್ದರು. ಅದರಿಂದ ಅವರು ಕೆರೆಕಟ್ಟೆಗಳನ್ನು ಚೆನ್ನಾಗಿ ಕಟ್ಟಿದ್ದಾರೆ. ಅದೇ ರೀತಿಯಲ್ಲಿ ಈ ಸರ್ಕಾರದವರೂ ಈ ವಿಷಯದಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಬಡವರ ಮೇಲೆ ಕರುಣೆಯಿಟ್ಟು ಅವರಿಗೆ ಕಂಟ್ರಾಕ್ಟುಗಳು ದೊರೆಯಲು ಹೆಚ್ಚಿನ ಅವಕಾಶ ಕಲ್ಪಿಸಿಕೊಡಬೇಕು ಎಂದು ಒತ್ತಾಯಪಡಿಸಿ ಮಾನ್ಯ ಅಧ್ಯಕ್ಷರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಭಾಷಣ ಮುಕ್ತಾಯಗೊಳಿಸುತ್ತೇನೆ.

*ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಮಾನ್ಯ ಮಿತ್ರರಾದ ಶ್ರೀ ನಾಗಪ್ಪಶೆಟ್ಟರು ಹೇಳಿರುವುದು ಬಹಳ ಸಾಧುವಾಗಿದೆ. ನಮ್ಮ ಜಿಲ್ಲೆಯ ಸುತ್ತುಮುತ್ತ ಕಂಟ್ರಾಕ್ಟುಮಾಡುವವರು ಯಾರೂ ಇಲ್ಲವೆ ಎಂಬುದನ್ನು ಯೋಚನೆಮಾಡಬೇಕು. ಅಲ್ಲಿ ಬೇಕಾದ ಕೆಲಸಗಾರರಿರುವಾಗ ಇತರ ಜಿಲ್ಲೆಗಳವರಿಗೆ ಮತ್ತ ಹೊರ ದೇಶದವರಿಗೆ ಕಂಟ್ರಾಕ್ಟನ್ನು ವಹಿಸುವುದು ಉಚಿತವಲ್ಲ. ನಮ್ಮ ಜಿಲ್ಲೆಯಲ್ಲಿ ದಕ್ಷರಿದ್ದಾರೆ, ಒಳ್ಳೆಯ ಕಂಟ್ರಾಕ್ಟರುಗಳಿದ್ದಾರೆ. ಆದರೆ ಅವರನ್ನು ಬಿಟ್ಟು ಯಾರಿಗೋ ಹೆಚ್ಚು ಪ್ರತಿಫಲ ಕೊಡಲು ಕೆಲಸಗಳನ್ನು ಬೇರೆಕಡೆಯವರಿಗೆ ವಹಿಸಿದ್ದಾರೆ. ಇದು ಸರಿಯಲ್ಲ. ನಮ್ಮ ಕಡೆ ಬಂಡವಾಳಗಾರರೂ ಜಾಸ್ತಿಯಿದ್ದಾರೆ, ಅನೇಕ ತಾಲ್ಲೂಕುಗಳಲ್ಲಿ ಮಳೆ ಬೆಳೆ ಇಲ್ಲ. ಸರ್ಕಾರದ ದರ ಕೊಟ್ಟರೆ ಸಾಕು, ಕೆಲಸಮಾಡುತ್ತಾರೆ. ಮಂತ್ರಿಗಳು ಈ ವಿಚಾರವನ್ನು ಪರಿಶೀಲಿಸಬೇಕು.

*ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ಮರಾಮತ್ತು ಶಾಖೆಗಳ ಮಂತ್ರಿಗಳು).—ಸ್ವಾಮಿ, ಅಧ್ಯಕ್ಷರೆ, ಕೆಲಸವನ್ನು ಮೈಸೂರು ದೇಶದ ಕಂಟ್ರಾಕ್ಟರುಗಳಿಗೆ ಮತ್ತು ಮೈಸೂರು ದೇಶದ ಕೂಲಿಗಾರರಿಗೆ ಕೊಡುವ ತತ್ವವನ್ನು ಸಂಪೂರ್ಣವಾಗಿ ನಾನು ಒಪ್ಪುತ್ತೇನೆ. ಭದ್ರಾ ಜಲಾಶಯದಲ್ಲಿ ಕನ್‌ಸ್ಟ್ರಕ್ಷನ್ ಕೆಲಸವನ್ನು ಇಲಾಖೆಯವರು ಅಮಾನಿಯಾಗಿ ಮಾಡಿಸುತ್ತಾರೆ. ಉಳಿದ ಎಲ್ಲಾ ಕೆಲಸಗಳನ್ನೂ ಕೂಡ ಪೀಸ್ ವರ್ಕ್ ಸಿಸ್ಟಂ ಪ್ರಕಾರ ಕಂಟ್ರಾಕ್ಟರುಗಳಿಂದ ಮಾಡಿಸುತ್ತಿದ್ದೇವೆ. ಸ್ಥಳೀಯ ಕೆಲಸಗಾರರೆಷ್ಟು ಜನ ಬರುತ್ತಾರೆ, ಅವರು ಖಾಯಮಾಗಿ ಕೆಲಸಮಾಡುತ್ತಾರೆಯೆ ಎಂಬುದನ್ನ ಮಾನ್ಯ ಸದಸ್ಯರು ಗಮನಿಸಬೇಕು. ಮಾನ್ಯ ಅಧ್ಯಕ್ಷರಿಗೆ ಗೊತ್ತಿರುವಂತೆ ಅವರ ತಾಲ್ಲೂಕಿನಲ್ಲಿ ಹೋದ ವರ್ಷ ತುಂಗಾ ಅಣೆಕಟ್ಟಿನ ಕೆಲಸ ಪ್ರಾರಂಭಮಾಡಲಾಯಿತು. ಕೆಲವು ತಿಂಗಳ ಕಾಲ ಅಲ್ಲಿನವರು ಕೆಲಸಕ್ಕೆ ಬರುವುದಕ್ಕೆ ಷುರುಮಾಡಿದರು. ಯಾವಾಗ ಫಸಲು ಕಟಾವು ಕಾಲ ಬಂತೋ ಆಗ ಅವರು ಕೆಲಸಮಾಡುವುದನ್ನು ನಿಲ್ಲಿಸಿ ಹೊಲಕ್ಕೆ ಹೋದರು. ಇಂಥ ಪ್ರಾಜೆಕ್ಟುಗಳಲ್ಲಿ ಖಾಯಮಾಗಿ ಕೆಲಸಮಾಡುವ ಜನರು ಬೇಕು. ನಮ್ಮ ಮೈಸೂರಿನವರು ಅನ್ಯಥಾ ಭಾವಿಸಬಾರದು. ಮೈಸೂರು ಜನರು ಅಂಥ ಕಡೆ ಕೆಲಸಮಾಡುವುದು ಅಪರೂಪ. ಮನಸ್ಸುಮಾಡಿದರೆ ವರ್ಷದಲ್ಲಿ 3-4 ತಿಂಗಳು ಕೆಲಸಮಾಡಿ ಆಮೇಲೆ ಗದ್ದೆ ಅಥವಾ ಹೊಲದ ಕಡೆ ಹೋಗುತ್ತಾರೆ. ಅದು ತಪ್ಪು ಎಂದು ಹೇಳುವುದಿಲ್ಲ. ಸಾಧಾರಣವಾಗಿ ಜಲಾಶಯಗಳಲ್ಲಿ ಕೆಲಸಮಾಡುವವರು ಹೊರಗಿನವರು. ಇತ್ತೀಚೆಗೆ ಮದ್ರಾಸಿನಿಂದ ಕೂಡ ಬಂದಿದ್ದಾರೆ.

ಶ್ರೀ ನಾಗಪ್ಪಶೆಟ್ಟರು ಮಾತನಾಡುವಾಗ ಕಂಟ್ರಾಕ್ಟರುಗಳನ್ನು ರಿಜಿಸ್ಟರ್ ಮಾಡಬೇಕೆಂದು ಹೇಳಿದರು. ಆ ವಿಚಾರ ಎರಡುಮೂರು ವರ್ಷಗಳಿಂದ ಸರ್ಕಾರದ ಪರಿಶೀಲನೆಯಲ್ಲಿದೆ. ರಿಜಿಸ್ಟ್ರೇಷನ್ ಮಾಡಿದರೆ ಸಾಧಕ ಬಾಧಕ ಎರಡೂ ಇವೆ. ರಿಜಿಸ್ಟ್ರೇಷನ್ ಮಾಡಿದರೆ ಅವರೆಲ್ಲಾ ಒಗ್ಗಟ್ಟಾಗುವುದಕ್ಕೆ ಅವಕಾಶ ಕೊಟ್ಟಂತಾಗುವುದರಿಂದ ದೇಶಕ್ಕೆ ಅಪಾಯವೆಂದು ತಿಳಿದುಕೊಂಡಿದ್ದೇನೆ. ಆದರೂ ಕೂಡ ರಿಜಿಸ್ಟ್ರೇಷನ್ ಮಾಡುವುದಕ್ಕೆ ಸಾಧ್ಯವೆ ಎಂಬುದನ್ನು ಪರಿಶೀಲಿಸುತ್ತಿದ್ದೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ರಿಜಿಸ್ಟರ್ಡ್ ಕಂಟ್ರಾಕ್ಟರುಗಳ ಪಟ್ಟಿಮಾಡಿ ಎಂದು ನಾನು ಹೇಳುವುದು.

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನೂ ಪರಿಶೀಲನೆ ಮಾಡುತ್ತಿದ್ದೇವೆ. ಆ ಮೇಲೆ ಮೈಸೂರು ದೇಶದ ಕಂಟ್ರಾಕ್ಟರುಗಳಿಗೆ ಕೊಡುವುದಿಲ್ಲ, ಇತರರು ಪೈಪೋಟಿಯಿಂದ ಮೈಸೂರು ದೇಶದ ಕಂಟ್ರಾಕ್ಟರುಗಳ ಹತ್ತಿರ ಕೆಲಸಮಾಡುವ ಕೂಲಿಗಾರರನ್ನು ಚದರಿಸುತ್ತಿದ್ದಾರೆ ಎಂದು ಹೇಳಿದರು. ಇದಕ್ಕೆ ಸರ್ಕಾರ ಏನೂ ಮಾಡುವುದಕ್ಕಾಗುವುದಿಲ್ಲ. ಅವರಿಗೆ ತಾಕತ್ತಿದ್ದರೆ ಕೂಲಿಗಳನ್ನ ಶೇಖರಿಸಿ ಕೆಲಸಮಾಡುತ್ತಾರೆ. ಆ ಶಕ್ತಿಯಿಲ್ಲದಿದ್ದರೆ ಸರ್ಕಾರದವರೇನೂ ಮಾಡುವುದಕ್ಕಾಗುವುದಿಲ್ಲ. ನಮ್ಮ ಅಧಿಕಾರಿಗಳಿಗೆ ಸೂಕ್ತವಾಗಿ ಹೇಳಿದ್ದೇನೆ; ಸಾಮಾನ್ಯವಾಗಿ ಸ್ಥಳದ ಕೆಲಸಗಾರರಿಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು, ಪ್ರೋತ್ಸಾಹ ಕೊಡಬೇಕು ಎಂದು. ಅದು ಅಗತ್ಯವೆಂದು ಹೇಳಿದೆ. ಅಲ್ಲಲ್ಲಿ ಸಣ್ಣಪುಟ್ಟ ಕೂಲಿಯವರನ್ನು ಷರೀಕುಮಾಡಿಕೊಂಡು ಸಣ್ಣಪುಟ್ಟ ಅಧಿಕಾರಿಗಳು ಅಲ್ಪಸ್ವಲ್ಪ ಸರ್ಕಾರಕ್ಕೆ ದ್ರೋಹಮಾಡುತ್ತಾರೆಂದು ಕೆಲವು ಕಡೆ ನನ್ನ ಗಮನಕ್ಕೆ ಬಂದಿದೆ. ನಾನು ಅವರಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದೇನೆ. ಮಾನ್ಯ ಸದಸ್ಯರು ಸ್ವಲ್ಪ ನಮಗೆ ಸಹಾಯಮಾಡಿದರೆ ಎಷ್ಟು ಉಗ್ರ ಕ್ರಮ ಬೇಕೋ ಅಷ್ಟನ್ನು ತೆಗೆದುಕೊಳ್ಳಲು ಸಿದ್ಧವಾಗಿದ್ದೇನೆ. ರುಜುವಾತಿಲ್ಲದೆ ಯಾರಮೇಲೂ ಉಗ್ರಶಿಕ್ಷೆ ವಿಧಿಸುವುದಕ್ಕಾಗುವುದಿಲ್ಲ. ಶ್ರೀ ನಾಗಯ್ಯರೆಡ್ಡಿಯವರಿಗೆ ಇದು ಚೆನ್ನಾಗಿ ಗೊತ್ತಿರಬೇಕು. ಸುಮ್ಮನೆ ಲೋಕಾಭಿರಾಮವಾಗಿ ಹೇಳಿದರೆ ಸ್ವಲ್ಪವೂ ಪ್ರಯೋಜನವಾಗುವುದಿಲ್ಲ. ಇಂಥಕಡೆ ಅಚಾತುರ್ಯ ನಡೆಯುತ್ತಿದೆಯೆಂದು ಸ್ವಲ್ಪಮಟ್ಟಿಗಾದರೂ ರುಜುವಾತು ಒದಗಿಸುವುದಕ್ಕೆ ಪ್ರಯತ್ನಮಾಡಿದರೆ ನಮ್ಮ ಭಾಗದ ಕೆಲಸಮಾಡುವುದಕ್ಕೆ ನಾವು ಸದಾ ಸಿದ್ಧರಾಗಿದ್ದೇವೆ. ಇನ್ನು ಮುಂದೆಯೂ ಕೂಡ ಸ್ಥಳೀಯ ಕಂಟ್ರಾಕ್ಟರುಗಳಿಗೆ ಮತ್ತು ಸ್ಥಳದ ಕೂಲಿಗಾರರಿಗೆ ಸಾಕಾದಷ್ಟು ಪ್ರೋತ್ಸಾಹ ಕೊಡುವಂತೆ ಪುನಃ ತಿಳಿಸುತ್ತೇವೆಂದು ಭರವಸೆಕೊಡುತ್ತೇನೆ.

Nugu Gates.

SRI S. SRINIVASA IYENGAR (T.-Narasipur).—Mr. Speaker, I believe that the constructing of a reservior across Nugu was estimated twelve years ago to cost about 80 lakhs. To-day, according to the revised estimate, it comes to 2·2 crores. Sir,

it is very necessary that we must provide funds immediately to see that the work is executed ; there is no difference of opinion about that. But, I should like to know why the work was delayed. Sir, as far as I know, the delay is about the gates. In the Explanatory Note I see an observation that as they would be receiving the gates in the month of December 1954, they want some funds to meet the Bill. Well, Sir, about a few years ago the department thought of changing the design. Prior to that they had already called for tenders for the gates as per old design. That tender was for about 3 lakhs. If they had only got them in those days, they could have got them within 3 or 4 lakhs and the work would have been completed by now. There was a hitch and Government was not able to decide over that issue for a number of years and now they have changed the design and called for tenders. It is a separate design ; there is a change in the design. Perhaps, now, it will be costing more than what it used to be before. As I was talking to the Hon'ble Minister a few minutes ago, I learnt that it may cost a little less because of the change in the design. At Nugu, I have seen, walls of the dam constructed leaving huge place for the introduction of the gates. Further, I want to know why there has been so much of delay for the finalisation of the design, and the completion of the project. I also want to know the reason for the inflation of the estimate from 80 lakhs to 2·2 crores and the time that Government would take to complete the project.

ಶ್ರೀ ಎಂ. ಲಿಂಗಣ್ಣ (ನಂಜನಗೂಡು).—ಈ ನುಗು ಪ್ರಾಜೆಕ್ಟಿಗೆ ಸಂಬಂಧಪಟ್ಟಂತೆ ನಂಜನಗೂಡು ಕಸಬ ದಲ್ಲಿರತಕ್ಕಂಥ ಅರಸಿನಕೆರೆಯವರೆಗೆ ಕಾಲುವೆ ತೆಗೆಯುತ್ತಿದ್ದಾರೆ. ಇನ್ನು ಸ್ವಲ್ಪ ದಿವಸಕ್ಕೆ ನಾಲೆ ತೆಗೆಯುವುದು ಅರಸಿನಕೆರೆ ಮುಟ್ಟಬಹುದು. ಈ ಕಾಲುವೆ ತೆಗೆಯುವಾಗ ಅದರ ಜೊತೆಯಲ್ಲೇ ನಾಲೆಯ ದಕ್ಷಿಣ ಭಾಗದಲ್ಲಿರುವ ಜಮೀನುಗಳವರು ಮತ್ತು ಪಕ್ಕದಲ್ಲಿರುವ ಹಳ್ಳಿಗಳವರು ತಿರುಗಾಡುವುದಕ್ಕೆ ಮತ್ತು ಅವರ ವಾಹನ ಸೌಕರ್ಯಕ್ಕೆ ಕೆಲವು ಕಡೆ ಅಂದರೆ ನುಗುವಿನಿಂದ ಅರಸಿನಕೆರೆಯವರೆಗೆ ಸೇತುವೆ ಕಟ್ಟುತ್ತಿದ್ದಾರೆ. ಈಗ ಆ ಬಗ್ಗೆ ಎಸ್ಟಿಮೇಟಾಗಿ ಕೆಲಸ ನಡೆಯುತ್ತಿದೆ. ನನಗೆ ಗೊತ್ತಿರುವ ಹಾಗೆ ಈಗ ಪ್ರಪೋಸ್ ಮಾಡಿರುವುದು, ಈಗಿನ ಎಸ್ಟಿಮೇಟಿನ ಪ್ರಕಾರ ಸೇತುವೆ ಕಟ್ಟುವುದು ಸಾಲದು. ಇದನ್ನು ಆಗಲೇ ಮಾನ್ಯ ಮಂತ್ರಿಗಳಿಗೆ ಕೂಡ ತಿಳಿಸಿದ್ದೇನೆ. ಈಗಿರುವ ಎಸ್ಟಿಮೇಟನ್ನು ರಿವೈಜ್ ಮಾಡಿ ಅವಶ್ಯಕ ವಾಗಿರುವ ಇತರ ಕಡೆಗಳಲ್ಲೂ ಸೇತುವೆ ಕಟ್ಟಬೇಕಾದ್ದು ಅವಶ್ಯಕ. ಒಂದು ಸ್ಥಳದಲ್ಲಿ ಸೇತುವೆ ಹಾಕಲು ಹುಕುಂ ಸಾದರಾಗಿದೆ. ಮೂರು ನಾಲ್ಕು ಗ್ರಾಮ ಗಳವರಿಗೆ ಅನುಕೂಲವಾಗುತ್ತದೆ. ಅವರ ಮನೆಗಳು ನಾಲೆಯಿಂದ ಬರುವ ಜೌಗು ನೀರಿನ ಪ್ರದೇಶದಲ್ಲಿರು ವುದರಿಂದ ಸೇತುವೆ ಕಟ್ಟಿದ್ದರೆ ಮೇಲೆ ಹೋಗಿ ವಸತಿ ಗೃಹಗಳನ್ನು ಬದಲಾಯಿಸಿ ಅಲ್ಲಿ ವಾಸಮಾಡಬಹುದು. ಈ ಸಂದರ್ಭದಲ್ಲಿ ಸರ್ಕಾರದವರು ಡಿಸ್ಟ್ರಿಕ್ಟ್ ಲೆವಲ್ ನಲ್ಲಿ ಮೀಟಿಂಗ್ ಮಾಡಿದಾಗಲೂ ಈ ವಿಚಾರ ಹೇಳಿದೆ. ಜನ ಜಾನುವಾರುಗಳು ತಿರುಗಾಡಲು ಸೇತುವೆ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಇದರ ಬದಲು ಗಾಡಿ ತಿರುಗಾಡಲು ಸೇತುವೆ ಆಗಬೇಕು. ಕಡಜೆಟ್ಟಿ, ಎಲೆಹಳ್ಳಿ ಇಂಥ ಸ್ಥಳಗಳಲ್ಲಿ ಸೇತುವೆ ಅವಶ್ಯಕ. ಈ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ಈ ಸೇತುವೆಗೆ ಸಂಬಂಧಪಟ್ಟ ಅಂದಾಜನ್ನು ತಿದ್ದುಪಡಿ ಮಾಡಿ ಎಲ್ಲಿ ಅವಶ್ಯಕತೆಯಿದೆಯೋ ಅಲ್ಲಿಗೆ ಸೇತುವೆಗಳನ್ನು ಮಂಜೂರು ಮಾಡಬೇಕು.

ಇನ್ನೊಂದು ವಿಷಯ. ನುಗು ಪ್ರಾಜೆಕ್ಟ್ ಸಂಬಂಧದಲ್ಲಿ ಅಲ್ಲಿ ಕೆಲಸ ಮಾಡುವ ಇಂಜಿನಿಯರಿಂಗ್ ಇಲಾಖೆಯವರಿಗೆ ಮತ್ತು ಇತರರಿಗೆ ಸುಮಾರು 60 ವಸತಿ ಗೃಹಗಳನ್ನು ನಿರ್ಮಿಸಿದ್ದಾರೆ. ಸೇತುವೆ ಕೆಲಸ ಮುಗಿದಮೇಲೆ ಅಷ್ಟು ಜನರು ಅಲ್ಲಿರುವುದಿಲ್ಲ. ಸೇತುವೆ ಪೂರೈಸಿ ನೀರು ಬಿಟ್ಟಮೇಲೆ ಅಲ್ಲಿ 5 ಮನೆ ಬೇಕಾಗಬಹುದು, ಉಳಿದ ಮನೆಗಳು ನಿರರ್ಥಕವಾಗು ತ್ತವೆ. ಆದ್ದರಿಂದ ಅವನ್ನು ಯಾವ ರೀತಿ ಸರ್ಕಾರ ದವರು ಉಪಯೋಗಿಸುತ್ತಾರೆಂಬುದನ್ನು ತಿಳಿಯ ಬೇಕೆಂಬ ಆಸೆಯಿದೆ.

Sri Kadidal MANJAPPA.—Mr. Speaker, I am very glad to inform my friend Sri Srinivasa Iyengar that the design of the gates has been finalised and we are likely to get the gates by the end of December or the middle of January. No doubt there was some delay in bringing out the design. That was because there was difference of opinion between the engineers.

Sri S. SRINIVASA IYENGAR.—Persisting for five years ?

Sri Kadidal MANJAPPA.—No, only for six months. I had to go and tell the members of the standing technical advisory committee and the design was finalised.

A MEMBER.—Was it not finalised in 1953 at the annual meeting ?

Sri Kadidal MANJAPPA.—Yes, my friend was present at the time. It was finalised and immediately thereafter enquiry was instituted by the Stores Purchase Committee. There was delay in securing import permit. After some correspondence in the matter the permit was secured and subsequently arrangements have been made to secure the gates.

(SRI KADIDAL MANJAPPA.)

Sri Srinivasa Iyengar said that on account of the change in the design we are likely to lose some money. But I have to inform him that it is the other way. According to the old design, there was provision for three under sluices. And the estimated cost was Rs. 10 lakhs for the three gates. According to the modified design, the proposal is to instal one deep sluice gate and two curb gates. On account of this design the cost goes down to Rs. 4·6 lakhs. Therefore on account of the change in the design we have saved Rs. 5·4 lakhs.

My friend referred to the change in the revised estimate. It is quite natural. Prices went up and therefore naturally the estimate had to be revised.

My friend, (Sri Linganna,) brought to my notice that there is need for constructing some additional bridges to channels. His suggestion will be taken note of and the needful will be done.

(Sri G. Papanna rose.)

Mr. SPEAKER.—Now I bring to the notice of Hon'ble Members that on account of the limited time at our disposal and as we have to close the debate on all the Demands at Five of the Clock, I will strictly adhere to the time limit.

DEMAND No. 42—ELECTRICITY SCHEMES.

81-A.—Capital Account of Electricity Schemes Outside the Revenue Account.

Inadequate provision of electric power for Irrigation in Kolar District.

*ಶ್ರೀ ಜಿ. ಪಾಪಣ್ಣ (ಶಿಡ್ಲಘಟ್ಟ-ಚಿಕ್ಕಬಳ್ಳಾಪುರ).—ಸ್ವಾಮಿ, ಕಳೆದ ಮೂರು ವರ್ಷಗಳಿಂದ ಕೇಂದ್ರ ಸರ್ಕಾರದಿಂದ ವಿದ್ಯುಚ್ಛಕ್ತಿ ಒದಗಿಸಲು ಸುಮಾರು ಐವತ್ತು ಲಕ್ಷ ರೂಪಾಯಿಗಳಷ್ಟು ಸಾಲ ದೊರೆಯುತ್ತಾ ಇದ್ದರೂ, ಅದು ಕೋಲಾರ ಜಿಲ್ಲೆಗೆ ಎಷ್ಟುಮಟ್ಟಿಗೆ ಉಪಯೋಗವಾಗುತ್ತಿದೆಯೆಂಬುದನ್ನು ನೋಡಿದರೆ ಅದು ಬಹಳ ನಿರಾಶಾಜನಕವಾಗಿದೆ. ಅಲ್ಲಿ ನೀರಾವರಿ ಪಂಪುಗಳಿಗೆ ವಿದ್ಯುಚ್ಛಕ್ತಿ ಒದಗಿಸುವುದರಲ್ಲಿ ಪೂರ್ತಿ ಒಂದು ಪಂಪ್ setಗೆ ಸಹ ವಿದ್ಯುಚ್ಛಕ್ತಿ ಒದಗಿಸಿಲ್ಲ. ಕೇವಲ ನೂರು-ಇನ್ನೂರು ರೂಪಾಯಿ ಬಂಡವಾಳ ಹಾಕಿದ್ದರೂ ಒಂದು H. P. ವಿದ್ಯುಚ್ಛಕ್ತಿಯನ್ನು ಕೊಡಬೇಕು. ಹೀಗಿರುವಲ್ಲಿ ಸಾವಿರ ರೂಪಾಯಿ ಖರ್ಚುಮಾಡಿರುವಕಡೆ ಸಹ ಒಂದು H. P. ವಿದ್ಯುಚ್ಛಕ್ತಿಯನ್ನೂ ಒದಗಿಸದೇ ಇರುವುದು ಶೋಚನೀಯವಾದುದು. ಕೋಲಾರ ಜಿಲ್ಲೆಯಲ್ಲಿ ಎಷ್ಟುಮಟ್ಟಿಗೆ return ಬರುತ್ತಿದೆಯೆಂಬುದನ್ನು ಸರ್ಕಾರದವರು ಮನಗಂಡು, ಆ ಬಗ್ಗೆ ಪೂರ್ಣ ಅಂಕಿ ಅಂಶಗಳನ್ನು ಶೇಖರಿಸಿದರೆ ತಮಗೇ ಈ ಜಿಲ್ಲೆಯಿಂದ ಒಂದು ಲಕ್ಷ ರೂಪಾಯಿ return ಬರುತ್ತಿದೆಯೆಂಬುದು ಗೊತ್ತಾಗುತ್ತದೆ. ಹಾಗಿದ್ದರೂ ಸಹ ಸರ್ಕಾರದವರು ಇದನ್ನು ಗಮನಿಸದೆ ಈ ವಿಚಾರದಲ್ಲ ಪೂರ್ತಿ ಒಂದು pump setಗೆ ಸಹ ವಿದ್ಯುಚ್ಛಕ್ತಿ ಕೊಡದೇ ಇರುವುದರಿಂದ ರೈತರಿಗೆ ತೊಂದರೆಯಾಗಿದೆ. ಈ ಬಗ್ಗೆ ತಕ್ಕ ಪರಿಹಾರವನ್ನು ಕಲ್ಪಿಸಿಕೊಡಬೇಕೆಂದು ಕೋರುತ್ತೇನೆ.

*ಶ್ರೀ ಬಿ. ವಿ. ನಾರಾಯಣರೆಡ್ಡಿ (ಬಾಗೇಪಲ್ಲಿ-ಗುಡಿಬಂಡೆ).—ಸ್ವಾಮಿ, ಈ ವಿದ್ಯುಚ್ಛಕ್ತಿ ಸರಬರಾಜಿನ ವಿಚಾರದಲ್ಲಿ ಎಷ್ಟೋ ಸಾರಿ ಮಂತ್ರಿಗಳು ಭರವಸೆಗಳನ್ನು ನೀಡಿರುತ್ತಾರೆ. ಆದರೂ ಸಹ ಒಂದು ಭರವಸೆಯನ್ನೂ ಸಹ ಅವರು ಉಳಿಸಿಕೊಂಡಿಲ್ಲ. ಯಾವಾಗಲೂ 25 ಸೈಕಲ್‌ನ್ನು 50 ಸೈಕಲ್‌ಗೆ convert ಮಾಡುತ್ತೇವೆಂದು ಸಬೂಬು ಹೇಳಿಕೊಂಡು ಆ ನೆಪದಮೇಲೆ ವಿದ್ಯುಚ್ಛಕ್ತಿಯನ್ನೊದಗಿಸುವುದನ್ನು ಮುಂದುವರಿಸಿಕೊಂಡೇ ಬಂದಿರುತ್ತಾರೆಯೇ ಹೊರತು ಅವರು ಇತ್ತ ಭರವಸೆಯನ್ನೇನೂ ಈಡೇರಿಸಿಲ್ಲ. ಸೆಂಟ್ರಲ್ ಗವರ್ನ್‌ಮೆಂಟ್ ವಿದ್ಯುಚ್ಛಕ್ತಿ ಸರಬರಾಯಿಗಾಗಿ ಗ್ರಾಂಟು ಬರುತ್ತಿದ್ದರೂ ಸಹ, ಕೆ. ಜಿ. ಎಫ್., ಜೋಗ್ installation ಇವುಗಳಿಗೆ ವಿನಿಯೋಗಿಸುತ್ತಿದ್ದಾರೆಯೇ ಹೊರತು ಅಭಾವದ ಡಿಸ್ಟ್ರಿಕ್ಟ್‌ಗಳಿಗೆ ಖಂಡಿತವಾಗಿಯೂ ಉಪಯೋಗಿಸುತ್ತಿಲ್ಲ. ಇದನ್ನು ನಾನು ಅಂಕಿ ಅಂಶಗಳನ್ನರಿತು ಹೇಳುತ್ತಿದ್ದೇನೆ. ಸಾಮಾನ್ಯವಾಗಿ ನನಗೆ ತಿಳಿದಮಟ್ಟಿಗೆ ಒಂದು ಸಾವಿರ ರೂಪಾಯಿಗೆ ಒಳಪಟ್ಟ pump setಗೆಲ್ಲಾ ವಿದ್ಯುಚ್ಛಕ್ತಿ ಸರಬರಾಯಿ ಮಾಡಬೇಕೆಂದು ನಿಯಮವಿದ್ದರೂ, ಕೇವಲ ನಾನೂರು, ಐನೂರು ರೂಪಾಯಿಗಳ pump setಗಳಿಗೂ ವಿದ್ಯುಚ್ಛಕ್ತಿ ಒದಗಿಸಿಲ್ಲ. ಕೋಲಾರ ಡಿಸ್ಟ್ರಿಕ್ಟ್‌ನಲ್ಲಿ ನೀರಾವರಿಗಾಗಿ ವಿದ್ಯುಚ್ಛಕ್ತಿಯನ್ನು ಎಷ್ಟುಬಾರಿ ಕೇಳಿದರೂ ಒದಗಿಸದೆ ಸರ್ಕಾರದವರು ನಿಧಾನ ಮಾಡುತ್ತಿರುವುದು ನೋಡಿದರೆ, ಆ ಡಿಸ್ಟ್ರಿಕ್ಟ್‌ನಲ್ಲಿ non-Congress ಹೆಚ್ಚಾಗಿರುವುದರಿಂದ ಈ ರೀತಿ ಅನ್ಯಾಯಮಾಡುತ್ತಿದ್ದಾರೋ ಏನೋ ಎಂದು ಭಾವಿಸಬೇಕಾಗಿದೆ. ಜನತೆಗೆಮಾತ್ರ ಅನ್ಯಾಯಮಾಡದೆ ಈ ವಿಚಾರದಲ್ಲಿ ಸರ್ಕಾರದವರು ತೀವ್ರ ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು-ಉತ್ತರ).—ಸ್ವಾಮಿ, ಯಾವ ಯಾವ ಬಾಬಿಗೆ ತುರ್ತಾಗಿ ವಿದ್ಯುಚ್ಛಕ್ತಿ ಬೇಕೆಂಬುದನ್ನು ಮನಗಂಡು ಅದನ್ನು ಅಗತ್ಯವಾಗಿ ಒದಗಿಸಿಕೊಡುವ ಪೂರ್ಣ ಜವಾಬ್ದಾರಿ ಸರ್ಕಾರಕ್ಕೆ ಸೇರಿದುದು ಎಂದು ನನ್ನ ಖಚಿತ ಅಭಿಪ್ರಾಯ. ವಿದ್ಯುಚ್ಛಕ್ತಿ ಸಾಲದು ಎಂಬ ಕಾರಣವು ಅಷ್ಟಾಗಿ ಸರಿದೋರುವಂತೆ ನನಗೆ ಕಾಣುವುದಿಲ್ಲ. ಅವಶ್ಯಕವಾಗಿ ನಮಗೇ ಬೇಕಾಗಿರುವ ವಿದ್ಯುಚ್ಛಕ್ತಿಯನ್ನು ಮೊದಲ ಒದಗಿಸಿಕೊಂಡು ಅನಂತರ ಇತರರಿಗೆ ಒದಗಿಸಿಕೊಡುವ ವ್ಯವಸ್ಥೆ ಮಾಡಿಕೊಳ್ಳುವುದು ಈ ಇಲಾಖೆಯ ಮೇಲಿನ ಪೂರ್ಣ ಜವಾಬ್ದಾರಿಯಾಗಿದೆ. ತತ್ರಾಪಿ ಈ ದಿನ ತಾಲ್ಲೂಕುಗಳಲ್ಲಿ ಜನರು ವಿದ್ಯುಚ್ಛಕ್ತಿ ಅಭಾವದಿಂದ ಒದ್ದಾಡುತ್ತಿರುವುದನ್ನು ನೋಡಿದರೆ ನಮಗೆ ಭಯವಾಗುತ್ತದೆ. ವಿದ್ಯುಚ್ಛಕ್ತಿ ಅಭಾವದ ಪ್ರದೇಶಗಳಿಗೆ ಅತಿ ತ್ವರಿತವಾಗಿ ವಿದ್ಯುಚ್ಛಕ್ತಿಯನ್ನು

ಒದಗಿಸುವ ಪೂರ್ಣ ಜವಾಬ್ದಾರಿ ನಮ್ಮ ಸರ್ಕಾರದ್ದು, ಅವರು ಈ ಕೆಲಸವನ್ನು ಅತ್ಯಗತ್ಯವಾಗಿ ಅತಿ ಜರೂರಾಗಿ ಮಾಡಬೇಕೆಂದು ಕೋರುತ್ತೇನೆ.

Necessity to supply power to Irrigation pump-sets in Kodihalli Hobli, Kanakapura Taluk.

ಶ್ರೀ ಎಸ್. ಕರಿಯಪ್ಪ (ವಿರೂಪಾಕ್ಷಪುರ).—ಸ್ವಾಮಿ, ನನ್ನ ಛೋತಾ ಸೂಚನೆ ಹೀಗಿದೆ:

Sri S. SRINIVASA IYENGAR.—On a point of order, sir. Cut motions are not being moved. But the Hon'ble Member is reading out the cut motion.

Mr. SPEAKER.—He is only reading and not moving; he will only speak on the subject matter of the cut motion.

ಶ್ರೀ ಎಸ್. ಕರಿಯಪ್ಪ—ಸ್ವಾಮಿ, ಕಾನಕಾನಹಳ್ಳಿ ಆಹಾರ ಧಾನ್ಯಗಳ ವಿಚಾರದಲ್ಲಿ ಬೆಂಗಳೂರು ಡಿಸ್ಟ್ರಿಕ್ಟಿನ ಕಣಜ; ಇಲ್ಲಿಂದ ರಾಗಿ, ಈರುಳ್ಳಿ, ಕಡಲೇಕಾಯಿ ಇವುಗಳೆಲ್ಲಾ ವಿಶೇಷವಾಗಿ ಬೆಂಗಳೂರಿಗೆ ಬರುತ್ತಿವೆ. ಇಂಥ ತಾಲ್ಲೂಕಿನ ವಿಚಾರದಲ್ಲಿ ಸರ್ಕಾರದವರೇನಾದರೂ ನಿರ್ಲಕ್ಷ್ಯ ಮಾಡಿದರೆ, ಇದು ಬೆಂಗಾಡಾಗಿ ಪರಿಣಮಿಸಿ, ನಿರ್ನಾಮವಾಗುತ್ತದೆ. ಬೆಳೆ ಆಗುವಾಗ ಈ ತಾಲ್ಲೂಕಿನಲ್ಲಿ ವಿಪರೀತ ಮಳೆ ಆಯಿತು. ಈಗ ಮಳೆ ಇಲ್ಲದೆ ಬೆಳೆ ಹೋಗುತ್ತಿದೆ. ಜನರು ತಮ್ಮ ಜೀವನವನ್ನು ಸುಖವಾಗಿ ಯಾವ ಅಡ್ಡಿ ಆತಂಕವೂ ಇಲ್ಲದೆ ಜರುಗಿಸಿಕೊಂಡು ಹೋಗಲು ಮಾರ್ಗ ಕಾಣದೆ, ಗಾಬರಿಗೊಂಡಿದ್ದಾರೆ. ಈ ತಾಲ್ಲೂಕು ಬೆಂಗಾಡಾಗುವ ಪರಿಸ್ಥಿತಿಯನ್ನು ತಪ್ಪಿಸಿಕೊಳ್ಳಲೋಸುಗ 1932 ರಿಂದಲೂ ಒಂದೇ ಸಮನಾಗಿ ಪಂಪುಗಳಿಗೆ ವಿದ್ಯುಚ್ಛಕ್ತಿ ಒದಗಿಸಬೇಕೆಂದು ಕೇಳುತ್ತಿದ್ದಾರೆ. ಇದುವರೆಗೂ ಜನರ ಆ ಪ್ರಾರ್ಥನೆ ಇನ್ನೂ ಕೈಗೂಡಿಲ್ಲ. ಕಾನಕಾನಹಳ್ಳಿ ತಾಲ್ಲೂಕಿನಲ್ಲಿ ಯಾವ ನೀರಾವರಿ ಯೋಜನೆಯೂ ಇಲ್ಲ, ವಿದ್ಯುಚ್ಛಕ್ತಿ ಸರಬರಾಯಿ ಇಲ್ಲ. ಆದುದರಿಂದ ಅದು ಬಹಳ ಹಿಂದುಳಿದಿದೆ. ಅಧಿಕಾರಿಗಳಿಗೆ, ಮಂತ್ರಿಗಳಿಗೆ ಈ ತಾಲ್ಲೂಕು ಹಲವಾರು ಬಾರಿ ಕಣ್ಣಿಗೆ ಬೀಳತಕ್ಕ ತಾಲ್ಲೂಕು ಆಗಿದ್ದರೂ ಸಹ, ಮೂರೆ ಪ್ರದೇಶಗಳ ಭಾಗ್ಯ ಇದುವರೆಗೂ ಇದಕ್ಕೆ ಲಭಿಸಿಲ್ಲವೆಂದೇ ಹೇಳಬೇಕಾಗಿದೆ.

ಈ ತಾಲ್ಲೂಕಿನ ಒಂದು ಲಕ್ಷ ಎಪ್ಪತ್ತು ಸಾವಿರ ಎಕರೆ ಜಮೀನಿನ ಪೈಕಿ ಕೇವಲ ಐದು ಸಾವಿರ ಎಕರೆಯಷ್ಟು ಮಾತ್ರ ತರೀ ಜಮೀನಾಗಿದೆ. ಇದನ್ನು ನೋಡಿದರೆ ಈ ತಾಲ್ಲೂಕನ್ನು ಸರ್ಕಾರ ಇದುವರೆಗೆ ಉದಾಸೀನದಿಂದ ಕಂಡಿರಬೇಕೆಂಬುದು ವೇದ್ಯವಾಗುತ್ತದೆ. ಈಗಲಾದರೂ ಈ ತಾಲ್ಲೂಕಿನ ಕಡೆಗೆ ಸರ್ಕಾರ ಹೆಚ್ಚಿನ ನಿಗಾ ಕೊಡಬೇಕಾದುದು ಅಗತ್ಯವೆಂದು ಕಂಡುಬರುತ್ತದೆ. ಈಗಂತೂ ಸರ್ಕಾರಕ್ಕೆ ಸುಸಮಯವಾಗಿದೆ. 50 cycles ಇರತಕ್ಕ ಕಡೆಗಳಲ್ಲಿ ಈಗ ಸರಾಗವಾಗಿ ವಿದ್ಯುಚ್ಛಕ್ತಿ ದೊರೆಯುತ್ತಿಲ್ಲ. ಆದರೆ ಕಾನಕಾನಹಳ್ಳಿ ತಾಲ್ಲೂಕು, ಚನ್ನಪಟ್ಟಣ ತಾಲ್ಲೂಕು ಮತ್ತು ಮಾಗಡಿ ತಾಲ್ಲೂಕು—ಈ ಮೂರು ತಾಲ್ಲೂಕುಗಳಿಗೆ ಮಾತ್ರ ಈಗ ಸುದೈವವೆಂದೇ ಹೇಳಬೇಕಾಗಿದೆ. ಅಲ್ಲಿ 25 cycles line ಇದೆ. ಬಾಕಿ ಕಡೆ—50 cycles line ಇರುವ ಕಡೆ-ಈಗ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಅಡಚಣೆಯಾಗಿದೆ. . . .

ಶ್ರೀ ಬಿ. ವಿ. ನಾರಾಯಣರೆಡ್ಡಿ.—25 cycles ಇರುವ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಲು ಬೇಕಾದಷ್ಟು ಇದೆಯೇ ?

ಶ್ರೀ ಎಸ್. ಕರಿಯಪ್ಪ.—ಇದೆ; 1932 ರಿಂದ ಒಂದೇ ಸಮನಾಗಿ ಪ್ರಾರ್ಥನೆ ಮಾಡಿರತಕ್ಕ ಮತ್ತು ಅತ್ಯವಶ್ಯಕವಾಗಿ ಬೇಕಾಗಿರತಕ್ಕ ಈ ಪ್ರದೇಶದ ಪಂಪುಗಳಿಗೆ, ಅದರಲ್ಲಿಯೂ ಕೋಡಿಹಳ್ಳಿ I. P. setsಗೆ ವಿದ್ಯುಚ್ಛಕ್ತಿ ಸರಬರಾಯಿ ಮಾಡಬೇಕೆಂದು ಕೋರುತ್ತೇನೆ.

4-30 P.M.

Rural Electrification.

*ಶ್ರೀ ಎಂ.ಸಿ. ಆಂಜನೇಯ ರೆಡ್ಡಿ (ಚಿಂತಾಮಣಿ).—ಸ್ವಾಮಿ, ಈ ವಿದ್ಯುಚ್ಛಕ್ತಿ ವಿಚಾರದಲ್ಲಿ ನಾನು ಬಹಳ ವ್ಯಸನದಿಂದ ಹೇಳಬೇಕಾಗಿದೆ. ನಮ್ಮದು ಪ್ರತಿ ವರ್ಷವೂ ಕ್ಷಾಮದಿಂದ ನರಳುತ್ತಾ ಇರತಕ್ಕ ಡಿಸ್ಟ್ರಿಕ್ಟ್; ಅದರಲ್ಲೂ ಚಿಂತಾಮಣಿ ತಾಲ್ಲೂಕಿನ 2 ಹೋಬಳಿಗಳಲ್ಲಂತೂ ವಿಪರೀತ ತೊಂದರೆ ಇದೆ. ಈ ಪ್ರದೇಶದಲ್ಲಿ ಸುಮಾರು 2,000ಕ್ಕೂ ಮೇಲ್ಪಟ್ಟು ಬಾವಿಗಳಿದ್ದಾಗ್ಯೂ ಸಹ ಅವು 70-80 ಅಡಿ ಆಳಕ್ಕೆ ಇಳಿದಿವೆ. ಆದ್ದರಿಂದ ಅವು ಗಳಿಂದ ಕಪಿಲೆ ಹೊಡೆದು ನೀರು ತೆಗೆಯುವುದಕ್ಕೆ ಬಹಳ ಕಷ್ಟ ಎಂಬುದು ಸದಸ್ಯರನೇಕರಿಗೆ ಗೊತ್ತಿದೆ. ಅದರಲ್ಲೂ ಸಹ ಆಹಾರಪದಾರ್ಥಗಳನ್ನು ಬೆಳೆಯುವವರಿಗೆ ಮಳೆಗಾಲದಲ್ಲೂಕೂಡ ಸರಿಯಾದ ಫಸಲು ಬರುವುದಿಲ್ಲ ಎಂದಮೇಲೆ ಬೇಸಿಗೆಯಲ್ಲಿ ಯಾವರೀತಿಯಾಗುತ್ತದೆ ಎಂಬುದನ್ನು ಹೇಳಬೇಕಾಗಿಲ್ಲ. ಅಂತಹವರಿಗೆ ಪ್ರೋತ್ಸಾಹಕೊಡುವುದಕ್ಕಾಗಿ ತಾವು ಸ್ವಲ್ಪಮಟ್ಟಿಗಾದರೂ ಈ ಕಾರ್ಯಕ್ರಮವನ್ನು ಇದುವರೆಗೂ ಕಾರ್ಯರೂಪಕ್ಕೆ ತರದೆ ಇರುವುದನ್ನು ನೋಡಿದರೆ ಬಹಳ ವಿಷಾದ ಪಡಬೇಕಾಗಿದೆ. ಇದನ್ನು ಮಾನ್ಯ ಮಂತ್ರಿಗಳಲ್ಲಿ ಹೇಳಿಕೊಂಡಿದ್ದೇವೆ. ಅವರೂ ಸಹ ಆ ಬಾವಿಗಳನ್ನು ನೋಡಿದ್ದಾರೆ. ಅಷ್ಟಾಗಿಯೂ ಕೂಡ ನಮಗೆ ಸಹಾಯ ಮಾಡದೇಇರುವುದನ್ನು ನೋಡಿದರೆ ಬಹು ಮಟ್ಟಿಗೆ ವ್ಯಥೆಯಾಗುತ್ತದೆ. ಆದ್ದರಿಂದ ಈಗ ಲಾದರೂ ಈ ಚಿಂತಾಮಣಿ ತಾಲ್ಲೂಕಿನಲ್ಲಿರತಕ್ಕ ಎಲ್ಲಾ ವ್ಯವಸಾಯದ ಬಾವಿಗಳಿಗೂ ಕೂಡ ಪಂಪುಗಳನ್ನು ಹಾಕಿಕೊಂಡು ವ್ಯವಸಾಯ ಮಾಡಲು ವಿದ್ಯುಚ್ಛಕ್ತಿ ಒದಗಿಸಬೇಕೆಂದು ಹೇಳಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಟಿ. ಜಿ. ತಿಮ್ಮೇಗೌಡ (ತಿಪಟೂರು).—ಅನೇಕ ಸದಸ್ಯರು ಈ ವ್ಯವಸಾಯಕ್ಕಾಗಿ ವಿದ್ಯುಚ್ಛಕ್ತಿ ಒದಗಿಸಬೇಕೆಂಬ ವಿಚಾರದಲ್ಲಿ ಅನೇಕ ವಿಷಯಗಳನ್ನು ಹೇಳಿದ್ದಾರೆ. ದೊಡ್ಡದೊಡ್ಡ ಅಣೆಕಟ್ಟುಗಳು ಮತ್ತು ನಾಲೆಗಳ ಆಶ್ರಯ ಇಲ್ಲದೇಇರತಕ್ಕ ಪ್ರದೇಶಗಳಲ್ಲೂ ಸಹ ವಿದ್ಯುಚ್ಛಕ್ತಿ ಒದಗಿಸಬೇಕೆಂದು ಅನೇಕ ಕಡೆಗಳವರು ಮನವಿಮಾಡಿಕೊಂಡಿದ್ದಾರೆ ಮತ್ತು ಬಾವಿಗಳನ್ನು ಸಹ ತೆಗೆದು ಅದರಿಂದ ನೀರಾವರಿ ಮಾಡಿಕೊಳ್ಳಲು ವಿದ್ಯುಚ್ಛಕ್ತಿ ಇಲ್ಲದೆ ಬಹಳ ಕಷ್ಟಪಡುತ್ತಿದ್ದಾರೆ. ಆದ್ದರಿಂದ ನಾನು ಈಗ ಮನವಿಮಾಡಿಕೊಳ್ಳುವುದೇನೆಂದರೆ, ತಿಪಟೂರು ತಾಲ್ಲೂಕು ಮತ್ತು ಅದರ ಸುತ್ತಮುತ್ತಲ ಪ್ರದೇಶಗಳಿಗೆ ವ್ಯವಸಾಯಕ್ಕಾಗಿ ವಿದ್ಯುಚ್ಛಕ್ತಿ ಒದಗಿಸಿ ಕೊಡಬೇಕಾಗಿ ಮನವಿ ಮಾಡಿಕೊಳ್ಳ

(ಶ್ರೀ ಟಿ. ಜಿ. ತಿಮ್ಮೇಗೌಡ.)

ಲದ್ದೇನೆ. ಅಲ್ಲಿ ಸಾಧಾರಣವಾಗಿ ಖುಷ್ಕಿ ಜಮೀನೆ ಬಹಳ ಜಾಸ್ತಿಯಾಗಿ ಇದ್ದು ತರಿ ಜಮೀನು ತುಂಬ ಕಡಮೆಯಿರುವುದರಿಂದ ಬಾವಿಗಳಿಗೆ ಪಂಪುಗಳನ್ನು ಹಾಕಿಕೊಂಡು ಅದರ ಮುಖೇನ ವ್ಯವಸಾಯ ಮಾಡಬೇಕಾಗಿದೆ. ಇಲ್ಲಿ ಬತ್ತ ವಗ್ಗೈರೆ ಬೆಳೆಯಲು ಸಾಧ್ಯವಾಗದೆ ಬಹಳ ಅಭಾವ ಪ್ರದೇಶವಾಗಿದೆ, ಪ್ರತಿ ವರ್ಷವೂ ಆ ರೈತಾಪಿ ಜನರು ಅಕ್ಕಿ ವಗ್ಗೈರೆ ಕೊಂಡುಕೊಂಡೇ ಜೀವನ ಮಾಡಬೇಕಾಗಿದೆ. ಆದ್ದರಿಂದ ಸರ್ಕಾರದವರು ನೀರಾವರಿ ಬಾವಿಗಳಿಗೆ ವಿದ್ಯುಚ್ಛಕ್ತಿ ಒದಗಿಸಿ ಆಹಾರ ಬೆಳೆಯಲು ಹೆಚ್ಚಿನ ಸೌಲಭ್ಯವನ್ನೊದಗಿಸಿಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

Sri S. SRINIVASA IYENGAR (T. Narasipur).—Sir, I am glad to note that the Government have realised all at once that Periyapatna is the only Taluk headquarter of the State that has not been supplied with electricity so far. Sir, electrification of Periyapatna and the surrounding villages was being pressed for the last three years and still Government had not thought of providing funds for that item. Now they have at once realised that it is a place worth supplying electric power and they have asked us to vote a token grant. Sir, whenever this question was broached previously the Government used to say that they have a scheme of supplying power to Mercara in Coorg and that this question of electrification of Periyapatna would be taken up along with that. I want to know whether that scheme has been finalised and if so what it costs and is it in connection with that scheme that they are undertaking the electrification of these villages.

I request you, Sir, kindly to enlighten me on that issue.

*ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—ಸ್ವಾಮಿ, ಬೆಂಗಳೂರು ದಕ್ಷಿಣ ತಾಲ್ಲೂಕು ಸೋಮನಹಳ್ಳಿ ಸರ್ಕಲ್‌ನಲ್ಲಿ 1936ನೇ ಇಸವಿಯಿಂದಲೂ ಈ ವಿದ್ಯುಚ್ಛಕ್ತಿ ಒದಗಿಸಬೇಕೆಂದು ಮತ್ತು ಪಂಪುಗಳನ್ನು ಹಾಕಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ಸರ್ಕಾರದ ಮುಂದೆ ಹೇಳುತ್ತಲೆ ಇದ್ದಾರೆ. ಪ್ರತಿಯೊಂದು ಅಧಿವೇಶನದಲ್ಲೂ ಪ್ರಶ್ನೆಗಳು ಮತ್ತು ಖೋತಾನಿರ್ಣಯಗಳನ್ನು ಹಾಕುತ್ತಲೇ ಇದ್ದೇವೆ. ಆದಾಗ್ಯೂ ಇನ್ನೂ ಅದಕ್ಕೆ ಗಮನಕೊಟ್ಟಿಲ್ಲ. ಆದ್ದರಿಂದ ಆದಷ್ಟು ಜಾಗ್ರತೆ ಈ ವಿಚಾರಕ್ಕೆ ಸರ್ಕಾರದವರು ಗಮನ ಕೊಟ್ಟು ಇದನ್ನು ಖಂಡಿತವಾಗಿಯೂ ಮಾಡಿ ಕೊಡಬೇಕೆಂದು ಹೇಳಿ ಈ ಸಮಯದಲ್ಲಿ ಒತ್ತಾಯ ಪೂರ್ವಕವಾಗಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ (ಪೆರಿಯಾ ಪಟ್ಟಣ).—ಈ ಖೋತಾನಿರ್ಣಯದಲ್ಲಿ ಪೆರಿಯಾ ಪಟ್ಟಣಕ್ಕೆ . . . . .

Mr. SPEAKER.—On your behalf, Sri Sreenivasa Iyengar has already brought this matter to the notice of the House.

Sri H. M. CHANNABASAPPA.—I am exceedingly thankful to him, Sir.

ಪೆರಿಯಾ ಪಟ್ಟಣಕ್ಕೆ ವಿದ್ಯುಚ್ಛಕ್ತಿ ಸರಬರಾಯಿ ಮಾಡುವುದಕ್ಕಾಗಿ ಈ ಟೋಕನ್ ಗ್ರಾಂಟ್, ಕೊಡಬೇಕೆಂದು ಮಾತ್ರ ಹೇಳುತ್ತಾ ಇದ್ದೇನೆ. ಪೆರಿಯಾ ಪಟ್ಟಣಕ್ಕೆ ಇದುವರೆಗೂ ವಿದ್ಯುಚ್ಛಕ್ತಿ ಸರಬರಾಯಿ ಮಾಡದೆ ಇರುವುದಕ್ಕೆ ಕಾರಣವನ್ನು ಈಗಾಗಲೇ ಸೂಚನೆ ಮಾಡಿದ್ದಾರೆ. ಆದ್ದರಿಂದ ಸರ್ಕಾರದವರಿಗೆ ಆಶಯುವಿರಲಿಲ್ಲವೆಂಬುದು ತಪ್ಪು. ಪೆರಿಯಾ ಪಟ್ಟಣ ಮತ್ತು ಇನ್ನಿತರ 3-4 ಗ್ರಾಮಗಳಿಗೆ ವಿದ್ಯುಚ್ಛಕ್ತಿ ಸರಬರಾಯಿ ಮಾಡಲು 8 ಲಕ್ಷ ರೂಪಾಯಿಗಳ ಒಂದು ಅಂದಾಜು ಸರ್ಕಾರದವರ ಮುಂದೆ ಇದೆ. ಅದನ್ನು ಮಂಜೂರು ಮಾಡಿ ಇದುವರೆಗೂ ನಿಧಾನ ಮಾಡಿದ ತಪ್ಪಿಗೆ ತಾಲ್ಲೂಕಿನ ಎಲ್ಲಾ ಮುಖ್ಯ ಗ್ರಾಮಗಳಿಗೂ ಕೂಡ ವಿದ್ಯುಚ್ಛಕ್ತಿ ಸರಬರಾಯಿ ಮಾಡುವ ಕಾರ್ಯಕ್ರಮವನ್ನು ಈ ವರ್ಷವೇ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಲು ಈ ಸಂದರ್ಭವನ್ನು ಉಪಯೋಗಿಸಿಕೊಳ್ಳುತ್ತೇನೆ.

*ಶ್ರೀ ಎ. ಸಿ. ನಾಗಯ್ಯರೆಡ್ಡಿ (ಗೋರಿಬಿದನೂರು).—ಸ್ವಾಮಿ, ಈಚೆಗೆ ಸರ್ಕಾರದವರು ಒಂದು ಪಂಪೂ ಕೊಡಕೂಡದೆಂದು ಆಜ್ಞೆ ಹೊರಡಿಸಿದ್ದಾರೆ. ಅದಕ್ಕೆ ಕಾರಣ ಏನೆಂದರೆ, ಕರೆಂಟ್ ಸಪ್ಲೈ ಇಲ್ಲ ಎಂಬುದೇ ಆಗಿದೆ. ನಮ್ಮಲ್ಲಿ ಎಷ್ಟೇ ವಿದ್ಯುಚ್ಛಕ್ತಿ ತಯಾರಾದರೂ ಸಹ ಅದನ್ನು ಬೇರೆಯವರಿಗೆ ಕೊಡುತಾ ಇದ್ದಾರೆ, ಇದಕ್ಕೆ ಸಂಬಂಧಪಟ್ಟ ಮಿನಿಸ್ಟರ್ ಇದ್ದಬದ್ದದ್ದನ್ನೆಲ್ಲಾ ಬಳ್ಳಾರಿಗೆ ಸಾಗಿಸುತ್ತಾ ಇದ್ದಾರೆ ಎಂದು ದೇಶದಲ್ಲಿ ಜನ ಹೇಳುತ್ತಾ ಇದ್ದಾರೆ.

ಅಧ್ಯಕ್ಷರು.—ಅದು ತಪ್ಪು.

ಶ್ರೀ ಎ. ಸಿ. ನಾಗಯ್ಯರೆಡ್ಡಿ.—ಇನ್ನೊಂದು ವಿಷಯವೇನೆಂದರೆ, ಕೆಲವು ಸ್ಥಳಗಳಿಗೆ 10-15 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಎರಡು ಮೂರು ಪಂಪುಸೆಟ್ಟು ಹಾಕಿಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಅದೇ ಕೋಲಾರ ಡಿಸ್ಟ್ರಿಕ್ಟ್‌ನಲ್ಲಿ ನೋಡಿದರೆ ಆ ರೀತಿ ಕೊಟ್ಟಿರುವುದು ಬಹಳ ಕಡಿಮೆ. ಪಂಪುಸೆಟ್ಟು ಹಾಕಿಕೊಳುತ್ತೇವೆ, ಅವಕಾಶಕೊಡಿ, ಎಂದು ಯಾರು ಕೇಳುತ್ತಾರೋ ಅವರಿಗೆ ಅವಕಾಶಕೊಡಿ. ಆ ರೀತಿ ಏಕೆ ಕೊಡುವುದಿಲ್ಲವೋ ನನಗಂತೂ ಅರ್ಥವಾಗುವುದಿಲ್ಲ. ಬೊಂಬಾಯಿನವರಿಗೆ ಕೊಡಬೇಕಾದದ್ದು ನ್ಯಾಯವಾಗಿದೆ. ಅವರು ದೊಡ್ಡ ಮನುಷ್ಯರು. ಆಂಧ್ರದೇಶಕ್ಕೇಕೆ ಕೊಡಬೇಕು? ಸ್ವಲ್ಪ ವಿವೇಕ ಬೇಡವೆ? ಕರ್ನೂಲಿಗೆ ವಿದ್ಯುಚ್ಛಕ್ತಿದೀಪ, ಪೆರಿಯಾ ಪಟ್ಟಣಕ್ಕಿಲ್ಲ! ನಮ್ಮ ದೇಶದ ಜನರಿಗಿಲ್ಲದಿರುವಾಗ ಅಲ್ಲಿಗೇಕೆ ಕೊಡಬೇಕು? ಇಲ್ಲಿ ಈಗ ವಿದ್ಯುಚ್ಛಕ್ತಿ ಇಲಾಖೆ ಮಂತ್ರಿಗಳಿಲ್ಲ. ಅವರ ತಲೆಗೆ ಇದು ಹತ್ತುವುದು ಬಹಳ ಕಷ್ಟವೆಂದು ಕಾಣುತ್ತದೆ. ನಾನೇನೂ ಉತ್ಪ್ರೇಕ್ಷೆಮಾಡಿ ಹೇಳುತ್ತಿಲ್ಲ. ಇರುವ ವಿಷಯ ಹೇಳಿದೆ. ಅವರಿಗೆ ಸ್ವಲ್ಪ ಕಷ್ಟ. ಯಾವ ಎಸ್ಟಿಮೇಟ್

ಹೋದರೂ ಅದು ಮಂಜೂರಾಗುವುದಿಲ್ಲ. ಇದು ನಿಜ. ಆದ್ದರಿಂದ ಸರ್ಕಾರದವರು ಸ್ವಲ್ಪ ನೋಡಿ ಜಾಗ್ರತೆ ಬೇಕಾದ ಕಡೆಗಳಿಗೆ ವಿದ್ಯುಚ್ಛಕ್ತಿ ಒದಗಿಸಬೇಕು. ನಮ್ಮ ಗೌರಿಬಿದನೂರು ತಾಲ್ಲೂಕನ್ನು ಮರೆಯದೆ ಅಲ್ಲಿ ಮಳೆಯೇ ಇಲ್ಲದಿತವುದರಿಂದ ವಿದ್ಯುಚ್ಛಕ್ತಿಯನ್ನು ಅಲ್ಲಿಗೆ ಸಾಕಾದಷ್ಟು ಬೇಗ ಒದಗಿಸಬೇಕು. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ.

*ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಮಾಗಡಿ ತಾಲ್ಲೂಕಿನಲ್ಲಿ ನೂರು ಪಂಪುಗಳಿಗಾಗಿ ಹಣಕೊಟ್ಟು ಸುಮಾರು ಒಂದು ವರ್ಷದ ಮೇಲಾಯಿತು. 74 ಸಾವಿರ ರೂಪಾಯಿಗಳಿಗೊಂದು ಅಂದಾಜು, 1¼ ಲಕ್ಷ ರೂಪಾಯಿಗಳಿಗೊಂದು ಅಂದಾಜು ಹೀಗೆ ಎರಡು ಅಂದಾಜುಗಳು ಸರ್ಕಾರಕ್ಕೆ ಹೋಗಿ ಸುಮಾರು ಒಂದು ವರ್ಷವಾಯಿತು. ಮಾಗಡಿ ತಾಲ್ಲೂಕೆಲ್ಲಾ ಬೆಟ್ಟದ ಪ್ರದೇಶ. ಜನರಿಗೆ ಅಲ್ಲಿ ಆಹಾರ ಒದಗಿಸುವುದಕ್ಕೆ ಬಹಳ ಕಷ್ಟವಾಗಿದೆ. ಆದ್ದರಿಂದ ದಯವಿಟ್ಟು ಹಣಕಟ್ಟಿರುವ ರೈತರಿಗೆಲ್ಲಾ ಪಂಪುಗಳನ್ನೊದಗಿಸಬೇಕು. ಹಿಂದೆ ಕೆಲವು ಸ್ಥಳಗಳಲ್ಲಿ ಹತ್ತು ಲಕ್ಷ ಪಂಪುಗಳಿಗಾಗಿ ಖರ್ಚು ಮಾಡಿದ್ದೂ ಅನ್ಯಾಯವಾಗಿದೆಯೆಂದು ಕೇಳಿದ್ದೇನೆ. ಅದಕ್ಕೆ ಅವಕಾಶ ಕೊಡದೆ ಪ್ರಜೆಗಳು ಎಲ್ಲಿ ಹೆಚ್ಚಾಗಿ ಕೇಳುತ್ತಾರೋ, ಎಲ್ಲಿ ಆವಶ್ಯಕತೆಯಿದೆಯೋ, ಎಲ್ಲಿ ಬಾವಿ ತೆಗೆದು ಹಣಕಟ್ಟಿ ಕಾದಿದ್ದಾರೋ ಅಂಥ ಕಡೆಗಳಿಗೆ ಜಾಗ್ರತೆಯಾಗಿ ವಿದ್ಯುಚ್ಛಕ್ತಿಯನ್ನೊದಗಿಸಬೇಕು. ಮತ್ತು ಮೈಸೂರು ಸಂಸ್ಥಾನದಲ್ಲಿ ಹುಟ್ಟಿ ಬೆಳೆದಿರುವ ಕರೆಂಟಾದ್ದರಿಂದ ಮೊದಲು ನಮ್ಮ ದೇಶದವರಿಗೆ ಅವಕಾಶಕೊಟ್ಟು ಅನಂತರ ಇತರರಿಗೆ ಕೊಡಬೇಕು ಎಂದು ಈ ಸಂದರ್ಭದಲ್ಲಿ ಕಡ್ಡಾಯವಾಗಿ ವಿನಂತಿಮಾಡಬೇಕಾಗಿದೆ. ಏಕೆಂದರೆ, ಮೈಸೂರು ಸಂಸ್ಥಾನದಲ್ಲಿ ಅನೇಕ ರೈತರುಗಳಿಂದ ವಸೂಲಾದ ಮೊಬಲಗಿನಿಂದ ಉತ್ಪತ್ತಿಯಾಗಿರುವ ವಿದ್ಯುಚ್ಛಕ್ತಿಯನ್ನು ದೇಶಾದ್ಯಂತ ನಮ್ಮ ಜನರಿಗೆ ಮೊದಲು ಒದಗಿಸಿ ಆಮೇಲೆ ಹೊರದೇಶಗಳಿಗೆ ಕೊಡಬೇಕೇ ವಿನಾ ನಮ್ಮ ದೇಶದ ಬೇಡಿಕೆಯನ್ನು ಮನ್ನಿಸದೆ ಕೊಡಬಾರದು. ಹಾಗೆ ಮಾಡದಿದ್ದರೆ ನಮ್ಮ ಜನರಿಗೆ ಅನಾನುಕೂಲವಾಗುತ್ತದೆ. ಇದನ್ನು ಸರ್ಕಾರದವರು ಕಡ್ಡಾಯವಾಗಿ ಗಮನಿಸಿ ಮಾಗಡಿ ತಾಲ್ಲೂಕಿನ ರೈತರಿಗೆ ಹೆಚ್ಚಿನ ಸೌಕರ್ಯ ಕಲ್ಪಿಸಿಕೊಡಬೇಕು. ಹಣ ಕಟ್ಟಿರುವವರ ಬೇಡಿಕೆಯನ್ನು ಜಾಗ್ರತೆಯಾಗಿ ಪೂರೈಸಬೇಕು ಎಂದು ಈ ಮೂಲಕ ಪ್ರಾರ್ಥನೆಮಾಡುತ್ತೇನೆ.

Power Supply to Villages in Chitaldrug District

*Sri Mulka GOVINDA REDDY (Chitaldrug).—Mr. Speaker, Sir, as you are aware, electricity plays a very important part in the production of wealth of any country, which in turn changes the very mode of life. Hence, it is necessary that utmost priority is given to the generation of electricity and its utilisation. As is the case in other advanced countries, electricity has proved to be a very good asset and has proved to be a boon to the people. Sir, Sri S. V. Rama Murthy while delivering the Convocation Address at Mysore, said that even to have a stable democracy electrical energy should be generated and be made use of. When such is the case, I really cannot understand the way in which the Government of Mysore is going ahead with this problem. They are not evincing as much interest as they ought to in trying to see that more generation stations are established and electrical energy is supplied for the production of foodgrains and for industrial purposes.

Sir, in Chitaldrug District there are more than 7,000 wells. I am sorry to say that not more than 500 wells have been supplied with pump-sets. As all are aware, Sir, Chitaldrug distrist is a famine stricken area and top priority must be given to that district. While preparing estimates, some discrimintion is being made from man to man and village to village. In certain cases, unnecessary and unavoidable delay is being caused. Such a thing should not be allowed to happen. In cases where power has been sanctioned, drawing up lines is unnecessarily delayed. I do not know why Government have not cared to enquire into this state of affairs. The names of the villages are as follows: Dodagatta in Chitaldrug Taluk, Chanaganalli, Devareddihalli, Chitranaikanalli, Nerlagunte, Doddanmarthi, Ramjogihalli in Challakere Taluk; Nagasandra in Molakalmuru Taluk and Maradihalli, Gollalli, Basappanamalige in Hiriyur Taluk. These villages have applied for supply of power. I would urge upon Government to immediately sanction the estimates and see that power is supplied to these villages.

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ಹರಿಹರ ಮತ್ತು ಹೊನ್ನಾಳಿ ತಾಲ್ಲೂಕುಗಳ ವಿಚಾರದಲ್ಲಿ ಬಂದ ಪ್ರಸ್ತಾಪದ ವಿಚಾರದಲ್ಲಿ ಒಂದೆರಡು ಮಾತು ಹೇಳಬೇಕಾಗಿದೆ. ಹರಿಹರ ಮತ್ತು ಹೊನ್ನಾಳಿ ತಾಲ್ಲೂಕು ನೀರಾವರಿ ಕಾಂಗಾರಿಗೆ ವಿದ್ಯುಚ್ಛಕ್ತಿಯನ್ನು ಸಾಕಾದಷ್ಟು ಈ ಸರ್ಕಾರದವರು ಮಂಜೂರು ಮಾಡಿದ್ದಾರೆ. ಇವಕ್ಕೆ ಮೊದಲೇ ಹೆಚ್ಚು ಆಹಾರ ಬೆಳೆಯಿರಿ ಎಂಬ ಯೋಜನೆ ಮೈಸೂರು ದೇಶಕ್ಕೆ ಮಾತ್ರವಲ್ಲದೆ ಇಡೀ ಹಿಂದೂಸ್ಥಾನಕ್ಕೇ ತಯಾರಾಗಿ ಇಂಡಿಯಾ ಸರ್ಕಾರದವರಿಗೆ ಹೋಗಿ ಅವರೂ ಸಹ ಕೂಲಂಕಷವಾಗಿ ಪರಿಶೀಲಿಸಿ ಅದು ಬಹಳ ಅತ್ಯುತ್ತಮವಾದ ಯೋಜನೆ,

(ಶ್ರೀ ಎಚ್. ಸಿದ್ಧವೀರಪ್ಪ.)

ಅದನ್ನು ಜಾರಿಗೆ ತಂದರೆ ನೀರಿಗೆ ತೊಂದರೆ ಇರುವುದಿಲ್ಲ ಎಂದು ಹೇಳಿ ಮಂಜೂರು ಮಾಡಿದ ಹತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿಲ್ಲ. ಸುಮಾರು 3—3½ ಲಕ್ಷ ರೂಪಾಯಿಗಳು ಖರ್ಚಾಗಿವೆ. ಇತ್ತೀಚೆಗೆ ಸ್ವಲ್ಪ ಜಾಸ್ತಿಯಾಗಿದೆ. ಹೊನ್ನಾಳಿಯಲ್ಲಿ ಸುಮಾರು 40—50 ಜನರಿಗೆ ಅನುಕೂಲ ಒದಗಿಸಿದೆ, ಹರಿಹರದ ಅಂಕಿ ಅಂಶ ನನ್ನಲ್ಲಿಲ್ಲ. ಆದರೆ ಗೋರಿಬಿದನೂರು ತಾಲ್ಲೂಕಿನಲ್ಲಿ 1924ನೆಯ ಇಸವಿಯಿಂದಲೂ ವಿದ್ಯುಚ್ಛಕ್ತಿಯ ಸಹಾಯವನ್ನು ಜನರು ಕಂಡಿರುವುದರಿಂದ ಅದು ಚೆನ್ನಾಗಿ ಅವರ ಮನಸ್ಸಿಗೆ ಹಿಡಿದಿರುವುದರಿಂದ ಅವರು ಅದನ್ನು ಚೆನ್ನಾಗಿ ಉಪಯೋಗಿಸುತ್ತಿದ್ದಾರೆ. ಆದ್ದರಿಂದ ಉಪಯೋಗಿಸುವವರಿಗೇನೂ ತೊಂದರೆಯಿಲ್ಲ. ಇದೂ ಅಲ್ಲದೆ ಬಳ್ಳಾರಿ ಜಿಲ್ಲೆಗೆ ಮುಂದಕ್ಕೆ ಲೈನು ಹಾಕಬೇಕು. ಆದ್ದರಿಂದ ಹಣ ದುರ್ವಿನಿಯೋಗ ಯಾವುದೂ ಆಗಿಲ್ಲ ಎಂದು ಅರಿಕೆ ಮಾಡಿಕೊಳ್ಳುತ್ತೇನೆ.

*ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲು).—ಸ್ವಾಮಿ, ವಿದ್ಯುಚ್ಛಕ್ತಿ ಅವಶ್ಯಕತೆಯ ವಿಚಾರದಲ್ಲಿ ಈ ಸಭೆಯಲ್ಲಿ ಬಹಳ ಮಟ್ಟಿನ ಒತ್ತಾಯ ಬಂದಿರುವುದು ಈಗ ಸರ್ಕಾರದವರಿಗೆ ಮನವರಿಕೆಯಾಗಿದೆ. ಈ ವಿಚಾರದಲ್ಲಿ ಸರ್ಕಾರದ ನೀತಿ ಸ್ಪಷ್ಟವಾಗಿರಬೇಕು. ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ, ಪ್ರಜಾಸರ್ಕಾರ ಸ್ಥಾಪಿತವಾದಮೇಲೆ, ಬರಬರುತ್ತಾ, ಪ್ರಜೆಗಳ ಆಶೋತ್ತರಗಳು ಈಡೇರಲು ಸರ್ಕಾರ ಸತತ ಪ್ರಯತ್ನ ಮಾಡಬೇಕಾದುದು ಅದರ ಆದ್ಯಕರ್ತವ್ಯ. ಈ ವಿದ್ಯುಚ್ಛಕ್ತಿ ಸರಬರಾಜಿನ ಬಗ್ಗೆ ಹಿಂದಿನ ಸರ್ಕಾರದವರು ಸಾಕಾದಷ್ಟು ಸಾಮಾನುಗಳಿಲ್ಲ, ತಾಮ್ರದ ಕಂಬಿಗಳ ಅಭಾವ ಎಂದು ಮುಂತಾದ ನೆಪಗಳನ್ನು ವಿದ್ಯುಚ್ಛಕ್ತಿಯ ಅಭಾವಕ್ಕೆ ಕಾರಣವಾಗಿ ಪ್ರತಿನಿಧಿಗಳ ಮುಂದೆ ಹೇಳುತ್ತಿದ್ದರು. ಈಗಿನ ಸರ್ಕಾರ, 25 cyclesನ್ನು 50 cyclesಗೆ convert ಮಾಡುವುದನ್ನೇ ಒಂದು ನೆಪವಾಗಿ ಹೇಳಿಕೊಂಡು, ಇದೇ ವಿದ್ಯುಚ್ಛಕ್ತಿ ಅಭಾವಕ್ಕೆ ಕಾರಣವಾಗಿದೆಯೆಂದು ಹೇಳುತ್ತಿದ್ದಾರೆ. ಸರ್ಕಾರದ ಈ ಧೋರಣೆ ಪ್ರತಿನಿಧಿಗಳಿಗೆ ಅಷ್ಟಾಗಿ ಸಮರ್ಪಕವಾಗಿ ತೋರುವುದಿಲ್ಲ. ಇದಕ್ಕಾಗಿ ಇಂಡಿಯಾ ಸರ್ಕಾರದಿಂದ ಸಹ ಯಥೇಚ್ಛವಾಗಿ ಸಹಾಯ ದೊರಕುತ್ತಿರುವಾಗ, ನಮ್ಮ ದೇಶದ ಬೆಳವಣಿಗೆಗೆ ಮುಖ್ಯ ಆಧಾರಭೂತವಾದ ನೀರಾವರಿ ಕಾಮಗಾರಿಗಳಿಗೆ ಅತ್ಯವಶ್ಯಕವಾಗಿ ಬೇಕಾದ ವಿದ್ಯುಚ್ಛಕ್ತಿಯನ್ನು ಸರ್ಕಾರ ಒದಗಿಸಲು ಸರ್ವಪ್ರಯತ್ನ ಮಾಡಿ, ಜನರ ತೊಂದರೆಯನ್ನು ನೀಗಿಸಿ, ದೇಶಕಲ್ಯಾಣಕ್ಕೆ ನೆರವಾಗಬೇಕು. ಇದೇ ಅವರ ನೀತಿ ಆಗಿರಬೇಕು. ಒಟ್ಟಿನಲ್ಲಿ ವಿದ್ಯುಚ್ಛಕ್ತಿ ಸರಬರಾಜಿನ ಬಗ್ಗೆ ಸರ್ಕಾರದ ನೀತಿ ಸ್ಪಷ್ಟವಾಗಿರಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

*Sri Kadidal MANJAPPA (Minister for Revenue and Public Works).—Sir, of all the districts, Kolar has no reason to complain or to grumble.

Sri S. SRINIVASA IYENGAR.—It has taken away a lion's share.

Sri Kadidal MANJAPPA.—In all the districts put together, there are 6,111 pump-sets. In Kolar District only there are 2,102 pump-sets. Government know that Kolar is liable to be affected by distress conditions. Therefore priority has been given to Kolar District.

In the year 1953-54, 261 pump-sets were serviced at a cost of Rs. 6·44 lakhs. Hon'ble Members may try to draw their own conclusion that the Government have given due importance to the demands of Kolar District.

(Interruption)

Other Hon'ble Members have stressed the need for supply of power to their own areas. Government are anxious to supply power, subject to the availability of funds, subject to the condition that the scheme is not prohibitive and also subject further to the condition that the power also is available.

Reference was made to the proposal for converting 25 cycles into 50 cycles. Action is being taken to prepare estimates. Hon'ble Members are perhaps aware of the fact that the proposal involves a considerable sum of money. And added to this, within one or two years we will realise that we will not be in a position to supply power either for lighting purposes or for other purposes unless new projects are taken up and additional energy is generated.

My friend, Sri Nagaiah Reddy objected to the supply of power to Andhra. Sir, there is an understanding, an agreement between the composite Madras State and the Mysore State for the supply of power to the Ceded Districts. According to that agreement power is taken to the Andhra State. I wish my friend had not made reference to...(*A Voice* :—'Inter-State allegations') No, not on the ability of my good friend Sri Nagan Gowda. I do not want to say anything more on that.

Mr. SPEAKER.—I do not think there is any personal allegation.

Sri Kadidal MANJAPPA.—Sir, coming to Tumkur District, I think that in 1952-53 Government had sanctioned nearly Rs. 9 lakhs for the supply of power for irrigation purposes. I am told that 40 or 50 pump-sets are in service now.

Hon'ble Members referred to Honnali Taluk. We are aware of the fact that Honnali Taluk is equally entitled to these sets. In the year 1952-53 we have sanctioned Rs. 12 or Rs. 11 lakhs to Chitaldrug District. My friend Sri Mulka Govinda Reddy referred to some discrimination and delay. If concrete instances are brought to the notice of the Government, they will take serious view of the matter and appropriate action.

Sri Mudlagiri Gowda who spoke last said that the Government of India are giving us any amount of money. That is a wrong impression. The Government of India no doubt are giving us money ; but not any amount of money that we require. We have got a special officer of the status of Superintendent. He has got the necessary staff. It may be that before the creation of that post the staff was not adequate. But it is not so now. But there is difficulty in securing materials like copper wire and iron hooks. These difficulties will be there. I can only say now that the Government are as anxious to help the raiyats to have the benefit of electricity for agricultural purposes as Hon'ble Members themselves.

Sri S. SRINIVASA IYENGAR.—What has happened to the Kellog line ?

Sri Kadidal MANJAPPA.—As regards Bagepalli, the remarks that I have made already in the case of Kolar District apply equally well for that taluk.

Sri B. V. NARAYANA REDDY.—He said that Kolar District was given a large amount but you have given only for Bowringpet.

Sri Kadidal MANJAPPA.—Sir, I know that Bagepalli is the worst affected area in the Kolar District. I know that. And Government are sympathetic towards Bagepalli.

Sri B. V. NARAYANA REDDY.—Only lip sympathy.

Sri Kadidal MANJAPPA.—As far as Periapatna is concerned, that is the only taluk headquarter which is not supplied with power. There is an estimate ready . . . .

5 P.M.

Mr. SPEAKER.—The time is over. The question is :

"That further sums not exceeding the sums specified in the motions for additional and supplementary demands for grants for the year 1954-55 and included in the list distributed to members be granted to the Government to defray the charges which will come in course of payment during year ending 31st day of March 1955 in respect of demands Nos. 2, 11, 14, 17, 23, 26, 27, 40, 42 and 45."

The motion was adopted.

(As directed by Mr. Speaker the motions for demands for Additional and Supplementary Grants which were adopted by the House are reproduced below.)

DEMAND NO. 2—STATE EXCISE.

8. STATE EXCISE DUTIES.

"That a further sum not exceeding Rs. 1,64,000 be granted to the Government to defray the charges which will come in course of payment during the year ending 31st day of March 1955, in respect of 'State Excise.'"

DEMAND NO. 11—GENERAL ADMINISTRATION.

25. GENERAL ADMINISTRATION (EXCEPT THE SUB-MAJOR HEADS B, C AND F).

"That a further sum not exceeding Rs. 2,00,000 be granted to the Government to defray the charges which will come in course of payment during the year ending 31st day of March 1955, in respect of 'General Administration (Except sub-major heads B, C and F).'"

(MR. SPEAKER.)

DEMAND NO. 14—ADMINISTRATION OF JUSTICE.

27. ADMINISTRATION OF JUSTICE.

"That a further sum not exceeding Rs. 20,000 be granted to the Government to defray the charges which will come in course of payment during the year ending 31st day of March 1955 in respect of 'Administration of Justice.'"

DEMAND NO. 17.—SCIENTIFIC DEPARTMENTS.

36. SCIENTIFIC DEPARTMENTS.

"That a further sum not exceeding Rs. 24,200 be granted to the Government to defray the charges which will come in course of payment during the year ending 31st day of March 1955, in respect of 'Scientific Departments.'"

DEMAND NO. 23—RURAL DEVELOPMENT.

40-A. RURAL DEVELOPMENT.

"That a further sum not exceeding Rs. 13,82,500 be granted to the Government to defray the charges which will come in course of payment during the year ending 31st day of March 1955, in respect of 'Rural Development.'"

DEMAND NO. 26.—INDUSTRIES AND SUPPLIES.

43. INDUSTRIES AND SUPPLIES (EXCEPT SERICULTURE).

"That a further sum not exceeding Rs. 10,35,700 be granted to the Government to defray the charges which will come in course of payment during the year ending 31st day of March 1955, in respect of 'Industries and Supplies (Except Sericulture).'"

DEMAND NO. 27.—SERICULTURE.

43. INDUSTRIES AND SUPPLIES—SERICULTURE.

"That a further sum not exceeding Rs. 2,52,000 be granted to the Government to defray the charges which will come in course of payment during the year ending 31st day of March 1955, in respect of 'Sericulture.'"

DEMAND NO. 40.—IRRIGATION.

68. CONSTRUCTION OF IRRIGATION, NAVIGATION, EMBANKMENT AND DRAINAGE WORKS OUTSIDE THE REVENUE ACCOUNT.

"That a further sum not exceeding Rs. 50,00,000 be granted to the Government to defray the charges which will come in course of payment during the year ending 31st day of March 1955, in respect of 'Construction of Irrigation, Navigation, Embankment and Drainage Works outside the Revenue Account.'"

DEMAND No. 42—ELECTRICITY SCHEMES.

81-A. CAPITAL OUTLAY ON ELECTRICITY SCHEMES.

"That a further sum not exceeding Rs. 25,00,400 be granted to the Government to defray the charges which will come in course of payment during the year ending 31st day of March 1955, in respect of 'Capital Outlay on Electricity Schemes.'"

DEMAND No. 45—ADVANCES AND LOANS.

R. LOANS AND ADVANCES BY THE STATE GOVERNMENT.

"That a further sum not exceeding Rs. 7,38,000 be granted to the Government to defray the charges which will come in course of payment during the year ending 31st day of March 1955, in respect of 'Loans and Advances by the State Government.'"

MR. SPEAKER.—The House will now rise for the day and meet to-morrow at 8-30 in the morning.

The House adjourned for the day at Two Minutes past Five of the Clock to meet again at Thirty Minutes past Eight of the Clock on Saturday, the 16th October 1954.